ಬೆಲೆ ರೂ.2.50 WPP No. SK/WPP/UDP/81/2012-2014
D.O.P - 15-12-2013 at Udupi Sorting Office

**Smt. Nagaveni Ullas**
Proprietor
Mobile : 9741626190
E-mail : rao.ullas@yahoo.co.in

**RAMDEV ENTERPRISES**
"Ramdev", Opp. Balaganapathi Temple, Padubidri-574111, Udupi Dist.

**Authorised Distributor For :**
1. KEYA-Amalgam Speciality Foods (I) Pvt. Ltd.
2. Swastiks-Vishnu Masala Food Pvt. Ltd.
3. Agarbathi, Loban & Camphor-Stockists

# ಶ್ರೀ ಶಾರದಾ

ಮಾಸಪತ್ರಿಕೆ - 15 ಅಕ್ಟೋಬರ್ 2014

॥ ಧಿಯೋ ಯೋನಃ ಪ್ರಚೋದಯಾತ್ ॥

Regn.No.KAR/KAN/2000/2758 ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ.) ಶ್ರೀ ಶಾರದಾ ಮಂಟಪ, ಶಾರದಾನಗರ, ಕುಂಜಿಬೆಟ್ಟು, ಉಡುಪಿ - 576 102. ☎ 2520754

ಸಂಪುಟ-14 ಸಂಚಿಕೆ-9 ಪುಟಗಳು-10 Registered Under No.KA/SK/UDP/1260/2012-2014 Dated from 01-01-2012 to 31-12-2014.

## ಉಡುಪಿಯಲ್ಲಿ ಸಂಭ್ರಮದ ನವರಾತ್ರಿ ಉತ್ಸವ

**ಉಡುಪಿಯ ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘದ ಆಶ್ರಯದಲ್ಲಿ ಕುಂಜಿಬೆಟ್ಟು ಶ್ರೀ ಶಾರದಾ ದೇವಸ್ಥಾನದಲ್ಲಿ ದಿನಾಂಕ 25-09-2014ರಿಂದ ಪ್ರಾರಂಭಗೊಂಡು 04-10-2014ರ ವರೆಗೆ ವಿವಿಧ ಧಾರ್ಮಿಕ ಹಾಗೂ ಸಾಂಸ್ಕೃತಿಕ ಆಚರಣೆಗಳೊಂದಿಗೆ ನವರಾತ್ರಿ ಹಬ್ಬವು ಸಂಭ್ರಮದಿಂದ ಸಂಪನ್ನಗೊಂಡಿತು.**



ಪ್ರತಿವರ್ಷದಂತೆ ಶ್ರೀ ಶಾರದಾ ಮಾತೆಗೆ ವಿವಿಧ ಅಲಂಕಾರ ಹಾಗೂ ಬೇರೆ ಬೇರೆ ಧಾರ್ಮಿಕ ವಿಧಿಗಳಿಂದ ಅರ್ಚಿಸಿದ್ದಲ್ಲದೆ, ಪ್ರತಿದಿನ ಸಂಜೆ ಸಮಾಜ ಬಾಂಧವರು ಹಾಗೂ ಆಸುಪಾಸಿನ ಭಕ್ತ ಜನರ ಭಜನೆ, ಲಲಿತಾಸಹಸ್ರನಾಮ ಪಾರಾಯಣ, ಸೌಂದರ್ಯಲಹರೀ ಸ್ತೋತ್ರಗಳ ಪಠಣ ಮೊದಲಾದುವುಗಳಿಂದ ವಿಶೇಷ ಪೂಜೆಯೂ ನೆರವೇರಿತು. ಲಲಿತಾ ಪಂಚಮಿಯ ದಿನ ಶ್ರೀ ದೇವಳದಲ್ಲಿ ವಿಶೇಷ ಪುಷ್ಪಾಲಂಕಾರ ಹಾಗೂ ಶ್ರೀ ದೇವಿಗೆ ಹೂವಿನ ಪೂಜೆ ನೆರವೇರಿತು. ನವಮಿಯಂದು ಸ್ವಾಧ್ಯಾಯ ಮಂಡಳಿಯ ಸದಸ್ಯರಿಂದ ದುರ್ಗಾ ಸಪ್ತಶತಿ ಪಾರಾಯಣವೂ ನಡೆಯಿತು. ಪ್ರತಿದಿನದ ಶ್ರೀ ದೇವರ, ದೇವಳದ ಅಲಂಕಾರದಲ್ಲಿ ದೇವಸ್ಥಾನದ ಅರ್ಚಕರಾದ ಶ್ರೀ ಧರಣೀಶಭಟ್, ಮೆನೇಜರ್ ಶ್ರೀ ಅಜಿತ್ ಕುಮಾರ್ ಹಾಗೂ ಶ್ರೀ ಮೋಹನ್‌ದೇವ್ ವಿಶೇಷ ಆಸಕಿ ವಹಿಸಿದ್ದರು.

### ವಿಜಯದಶಮಿ-ಶ್ರೀಚಂಡಿಕಾಯಾಗ

ವಿಜಯದಶಮಿಯಂದು ಬೆಳಿಗ್ಗೆ 8.30ಕ್ಕೆ ಶ್ರೀ ದೇವಸ್ಥಾನದಲ್ಲಿ ದೇವತಾ ಪ್ರಾರ್ಥನೆ ನೆರವೇರಿತು. ನಂತರ ಶ್ರೀ ಶಾರದಾ ಮಂಟಪದಲ್ಲಿ ಶ್ರೀ ಚಂಡಿಕಾ ಯಾಗದ ಸಿದ್ಧತೆ ನಡೆಯಿತು. ವೇದಮೂರ್ತಿ ಪಾವಂಜೆ ಶ್ರೀ ವಾಸುದೇವ ಉಪಾಧ್ಯಾಯರ ನೇತೃತ್ವದಲ್ಲಿ ಋತ್ವಿಜರು ಯಾಗದ ಕೈಂಕರ್ಯ ನೆರವೇರಿಸಿದರು. ಶ್ರೀಮತಿ ಪ್ರತಿಮಾ ಹಾಗೂ ಶ್ರೀ ವೈ.ವಿಠಲರಾವ್ ದಂಪತಿಗಳು ಯಾಗ ಕರ್ತೃಗಳಾಗಿ ಸಹಕರಿಸಿದರು. ಮಧ್ಯಾಹ್ನ 12.30ಕ್ಕೆ ಸರಿಯಾಗಿ ಶ್ರೀ ಚಂಡಿಕಾಯಾಗದ ಪೂರ್ಣಾಹುತಿ ನೆರವೇರಿತು.

### ವಿವಿಧ ಸ್ಪರ್ಧೆಗಳು

ಕಳೆದ ತಿಂಗಳ ಶ್ರೀ ಶಾರದಾ ಪತ್ರಿಕೆಯಲ್ಲಿ ಕೊಟ್ಟ ವಿವರಗಳಂತೆ ಸಮಾಜದ ಬೇರೆ ಬೇರೆ ವಯೋಮಾನಕ್ಕನುಗುಣವಾಗಿ ವಿವಿಧ ಸ್ಪರ್ಧೆಗಳು ಬೆಳಿಗ್ಗೆ 9.30ಕ್ಕೆ ಪ್ರಾರಂಭಗೊಂಡಿತು. ಮುಖ್ಯ ವೇದಿಕೆಯಲ್ಲಿ ಭಕ್ತಿಸಂಗೀತ, ಸ್ತೋತ್ರ ಕಂಠಪಾಠ, ಶಂಖ ಊದುವುದು, ಶೋಭಾನೆ ಹಾಡು ಮೊದಲಾದ ಸ್ಪರ್ಧೆಗಳು ನಡೆದರೆ ಊಟದ ಹಾಲ್‌ನಲ್ಲಿ ಬೆಂಕಿ ಇಲ್ಲದೆ ಅಡುಗೆ ಸ್ಪರ್ಧೆ, ಮೇಲಿನ ಮಾಳಿಗೆಯಲ್ಲಿ ಚಿತ್ರ, ರಂಗೋಲಿ ಸ್ಪರ್ಧೆಗಳು ನಡೆದವು.

ಮಹಾ ನವಮಿ-ವಿಜಯದಶಮಿ ಸರಕಾರಿ ರಜಾ ದಿನಗಳಾದರೂ ನವರಾತ್ರಿಯ ಉಳಿದ ದಿನಗಳು ಕೆಲಸದ ದಿನಗಳಾಗಿದ್ದು (Working Day), ಶಾಲಾ ಕಾಲೇಜುಗಳಿಗೆ ಹೋಗುವ ವಿದ್ಯಾರ್ಥಿಗಳಿಗಂತೂ ಪರೀಕ್ಷಾ ಸಮಯ ವಾಗಿದ್ದು, ತಂದೆ ತಾಯಂದಿರಿಗೆ ತಮ್ಮ ಮಕ್ಕಳ ಶಾಲಾ ಪರೀಕ್ಷಾ ತಯಾರಿಯಲ್ಲಿಯೇ ಆ ದಿನಗಳು ಕಳೆದದ್ದರಿಂದ ನವರಾತ್ರಿಯಲ್ಲಿ ಹಬ್ಬದ ವಾತಾವರಣವನ್ನುಂಟುಮಾಡಲು ಸಾಧ್ಯವಾಗದಿರುವುದು ಕಂಡು ಬಂತು. ಹಾಗಾಗಿ ನಮ್ಮ ಸ್ಪರ್ಧೆಗಳಿಗೂ ಈ ವರ್ಷ ಸ್ಪರ್ಧಾಳುಗಳ ಸಂಖ್ಯೆ ಕಡಿಮೆಯಿತ್ತೆಂದು ಅವರಿವರು ಮಾತನಾಡಿಕೊಳ್ಳುತ್ತಿರುವುದು ಕೇಳಿ ಬಂತು.

### ತೀರ್ಪುಗಾರರು-ನಿರ್ವಹಣೆ

ಈ ಎಲ್ಲಾ ಸ್ಪರ್ಧೆಗಳ ತೀರ್ಪುಗಾರರಾಗಿ ನಾವು ಕೇಳಿಕೊಂಡಂತೆ ಶ್ರೀ ಪ್ರಕಾಶ್ ರಾವ್ ಉಡುಪಿ, ಶ್ರೀ ಕೃಷ್ಣಮೂರ್ತಿರಾವ್ ಬ್ರಹ್ಮಾವರ, ಶ್ರೀ ವೇಣುಗೋಪಾಲರಾವ್ ಅಂಬಲಪಾಡಿ, ಶ್ರೀ ಸಂತೋಷರಾವ್, ಶ್ರೀ ವರುಣ್ ಕೇದಿಗೆ, ಶ್ರೀಮತಿ ಕುಸುಮಾ ನವೀನ್ ಮಂಗಳೂರು, ಶ್ರೀಮತಿ ಮೀರಾ ಆರ್. ರಾವ್, ಶ್ರೀಮತಿ ಗೀತಾ ಕೆ. ರಾವ್, ಮೊದಲಾದವರು ಸಹಕರಿಸಿದರು. ಅಲ್ಲದೆ ಸ್ಪರ್ಧೆಗಳ ನಿರ್ವಾಹಕರಾಗಿ ಶ್ರೀ ಜಗದೀಶರಾವ್ ಟಿ., ಪ್ರೀತಿ ಎಸ್. ರಾವ್, ಪವನ್‌ರಾವ್, ವ್ಯಾಸರಾವ್, ಆಕಾಶ್ ರಾವ್, ಕಾರ್ತಿಕ್ ಸಿ., ಗೌತಮಿ ಕೆ. ರಾವ್, ಪ್ರಕಾಶ್ ಕೋಲ್ಪೆ ಮೊದಲಾದವರ ಪರಿಶ್ರಮ ಗಣನೀಯವಾಗಿತ್ತು.

### ಬ್ರಾಹ್ಮಣ ಸುಹಾಸಿನೀ ಆರಾಧನೆ

ಯಾಗದ ಮಂಗಳಾರತಿ ಹಾಗೂ ಪೂರ್ಣಾಹುತಿಯಾಗುತ್ತಿದ್ದಂತೆ ಶ್ರೀ ದೇವಸ್ಥಾನದಲ್ಲಿಯೂ ಮಹಾಪೂಜೆ ನೆರವೇರಿತು. ನಂತರ ಶ್ರೀ ಶಾರದಾ ಮಂಟಪದಲ್ಲಿ ಬ್ರಾಹ್ಮಣ ಸುಹಾಸಿನೀ ಆರಾಧನೆ ನಡೆಯಿತು. ಸುಮಾರು 600ಕ್ಕೂ ಹೆಚ್ಚು ಭಕ್ತ ಬಾಂಧವರು ಮಧ್ಯಾಹ್ನದ ಭೋಜನ ಪ್ರಸಾದ ಸ್ವೀಕರಿಸಿದರು. ಊಟದ ನಂತರ ಹಲವು ಸಂಗೀತ ವಿದ್ಯಾರ್ಥಿಗಳು ಸಂಗೀತ ಹಾಡುವ ಮೂಲಕ ತಮ್ಮ ಪ್ರತಿಭೆಯನ್ನು ತೋರಿಸಿದರು. ಕು। ಪ್ರೇರಣಾ ಭರತನಾಟ್ಯ ಮೂಲಕ ಎಲ್ಲರನ್ನು ರಂಜಿಸಿದರು.

### ಸಭಾ ಕಾರ್ಯಕ್ರಮ

ನಂತರ ನಡೆದ ಸಭಾ ಕಾರ್ಯಕ್ರಮದಲ್ಲಿ ಅಧ್ಯಕ್ಷತೆಯನ್ನು ಸಂಘದ ಅಧ್ಯಕ್ಷರಾದ ಪ್ರಫುಲ್ಲಚಂದ್ರರಾಯರು ನಿರ್ವಹಿಸಿದರು. ಕರಂಬಳ್ಳಿ ವೆಂಕಟರಾವ್, ಕೊಕ್ರಾಡಿ ಸುರೇಶ್ ರಾವ್, ಕಾರ್ಯದರ್ಶಿ ಅರವಿಂದಕುಮಾರ್, ಕೋಶಾಧಿಕಾರಿ ಜಯರಾಮರಾವ್, ಜಯಲಕ್ಷ್ಮೀ ಮುರಳೀಧರ್, ಸಂತೋಷ್ ರಾವ್ ಮೊದಲಾದವರು ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಶ್ರೀಮತಿ ಭಾರತೀ ಕೊಡವೂರು ಅವರ ಪ್ರಾರ್ಥನೆಯ ಬಳಿಕ ಶ್ರೀ ಪ್ರಫುಲ್ಲಚಂದ್ರರಾವ್ ಎಲ್ಲರನ್ನೂ ಸ್ವಾಗತಿಸಿದರು. ಉಪಾಧ್ಯಕ್ಷ ಶ್ರೀ ವೇಣುಗೋಪಾಲರಾವ್ ಪ್ರಾಸ್ತಾವಿಕ ಮಾತುಗಳನ್ನಾಡಿ ಸಂಘದ ಕಾರ್ಯ ಚಟುವಟಿಕೆಗಳ ಸಂಪೂರ್ಣ ಮಾಹಿತಿ ನೀಡಿದರು.

ವೇದಿಕೆಯಲ್ಲಿ ಉಪಸ್ಥಿತರಿದ್ದ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ರಾಜ್ಯಕ್ಕೆ ರ್‍ಯಾಂಕ್ ವಿಜೇತೆಯಾದ ಮೈಸೂರಿನ ಕು। ಪ್ರೇರಣಾರನ್ನು ಸ್ಮರಣಿಕೆ-ನಗದು ಬಹುಮಾನ ನೀಡಿ ಗೌರವಿಸಲಾಯಿತು. ಪ್ರತಿವರ್ಷದಂತೆ ನೀಡುವ ವಿದ್ಯಾರ್ಥಿ ವೇತನವನ್ನು ಸಾಂಕೇತಿಕವಾಗಿ ವಿತರಿಸ ಲಾಯಿತು. ಉದಯಚಂದ್ರ ಪ್ರತಿಭಾ

(3ನೇ ಪುಟಕ್ಕೆ...)

### ವಿದ್ಯಾರ್ಥಿ ವೇತನ ವಿತರಣೆ

***ಪ್ರತಿ ವರ್ಷದಂತೆ ಈ ವರ್ಷವೂ ನಮ್ಮ ಸಮಾಜದ (ಪ್ರಥಮ ಪಿಯುಸಿ 28, ದ್ವಿತೀಯ ಪಿಯುಸಿ 26, ಪದವಿ 60, ಸ್ನಾತಕೋತ್ತರ ಪದವಿ 32, ವೈದ್ಯಕೀಯ ಮತ್ತು ಇಂಜಿನಿಯರಿಂಗ್ 21) ಒಟ್ಟು 167 ವಿದ್ಯಾರ್ಥಿ ಗಳಿಗೆ ರೂ.2,50,000/-ಗಳ ವಿದ್ಯಾರ್ಥಿ ವೇತನವನ್ನು ವಿತರಿಸಲಾಯಿತು.***

***ಬೆಳಗ್ಗೆಯಿಂದಲೇ ವಿದ್ಯಾರ್ಥಿವೇತನವನ್ನು ಮುದ್ರಿತ ಚೆಕ್ ಮೂಲಕ ವಿತರಿಸಲಾಗಿದ್ದು ದೂರದೂರುಗಳಿಂದ ಆಗಮಿಸಿರುವ ವಿದ್ಯಾರ್ಥಿಗಳು-ಹೆತ್ತವರು ವಿದ್ಯಾರ್ಥಿ ವೇತನವನ್ನು ಸ್ವೀಕರಿಸಿದರು. ವಿದ್ಯಾರ್ಥಿ ವೇತನದ ನಗದು ಮೌಲ್ಯ ಕಳೆದ ವರ್ಷಕ್ಕಿಂತ ಹೆಚ್ಚಿಸಬೇಕೆಂಬ ಆಡಳಿತ ಮಂಡಳಿಯ ನಿರ್ಣಯದಂತೆ ಈ ವರ್ಷ ವಿದ್ಯಾರ್ಥಿವೇತನ ವಿತರಿಸಲಾಗಿದೆ. ಈ ವಿದ್ಯಾರ್ಥಿವೇತನ ನಿಧಿಗೆ ಇನ್ನಷ್ಟು ದಾನಿಗಳ ನೆರವು ಹರಿದು ಬರಲಿ ಎಂದು ಶ್ರೀ ಶಾರದಾ ಹಾರೈಕೆ.***

### ರ್‍ಯಾಂಕ್ ವಿಜೇತೆಗೆ ಪುರಸ್ಕಾರ

**ಕಳೆದ ಆಗಸ್ಟ್ ತಿಂಗಳ ಶ್ರೀ ಶಾರದಾ ಪತ್ರಿಕೆಯಲ್ಲಿ ಪ್ರಕಟಗೊಂಡಂತೆ ಮೈಸೂರಿನ ಮರಿಮಲ್ಲಪ್ಪ ಪ್ರೌಢಶಾಲಾ ವಿದ್ಯಾರ್ಥಿನಿ ಕು। ಪ್ರೇರಣಾ ರಾವ್ ಮೈಸೂರು 2013-14ನೇ ಸಾಲಿನ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ 625ರಲ್ಲಿ 619 ಅಂಕ ಪಡೆದು ರಾಜ್ಯ ರ್‍ಯಾಂಕ್ ಪಟ್ಟಿಯಲ್ಲಿ ಸ್ಥಾನ ಗಳಿಸಿದ್ದಾರೆ. ಮೈಸೂರಿನ ನಮ್ಮ ಸಮಾಜದ ಸಂಘಟನೆಯಲ್ಲಿ ಸಕ್ರೀಯ ಸದಸ್ಯರಾಗಿರುವ ಚಾರ್ಟರ್ಡ್ ಅಕೌಂಟೆಂಟ್ ಶ್ರೀ ಎಮ್.ಆರ್. ಜಗದೀಶ್ ರಾವ್ ಮತ್ತು ಶ್ರೀಮತಿ ಗಾಯತ್ರಿ ದಂಪತಿಗಳ ಪುತ್ರಿಯಾಗಿರುವ ಕುಮಾರಿ ಪ್ರೇರಣಾಳ ವಿಶಿಷ್ಟ ಸಾಧನೆಯನ್ನು ಉಡುಪಿಯ ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘವು ಗುರುತಿಸಿ ವಿಜಯದಶಮಿಯಂದು ಗೌರವ ಪುರಸ್ಕಾರ ನೀಡಿ ಅಭಿನಂದಿಸಿತು.**



**ಸಂಪಾದಕ ಮಂಡಳಿ**

ಕೃಷ್ಣಕುಮಾರ್ ರಾವ್, ಮಟ್ಟು
ಕೆ. ವೇಣುಗೋಪಾಲ್ ರಾವ್
ಡಾ। ವೈ. ಸುದರ್ಶನ ರಾವ್
ಟಿ. ಸುರೇಶ್ ರಾವ್, ನಿಟ್ಟೂರು
ಟಿ. ವಿಶ್ವನಾಥ ಶಾನುಭಾಗ್, ವಿ.ಪಿ.ನಗರ
ಪ್ರಕಾಶ್ ರಾವ್ ಕೋಲ್ವೆ, ಮಣಿಪಾಲ

ಈ ಪತ್ರಿಕೆಯಲ್ಲಿ ಪ್ರಕಟವಾಗುವ ಲೇಖನ ಹಾಗೂ ವೈಯಕ್ತಿಕ ಜಾಹೀರಾತುಗಳಲ್ಲಿ ಅಭಿವ್ಯಕ್ತವಾಗುವ ಅಭಿಪ್ರಾಯಗಳು, ಅನಿಸಿಕೆಗಳು ಲೇಖಕರ ಹಾಗೂ ಜಾಹೀರಾತುದಾರರ ಸ್ವಂತ ಅಭಿಪ್ರಾಯಗಳೇ ಹೊರತು ಅವು ಪತ್ರಿಕೆಯ ಸಂಪಾದಕರ ಅಥವಾ ಪ್ರಕಾಶಕರ ಅಭಿಪ್ರಾಯ ವಾಗಿರಬೇಕಾಗಿಲ್ಲ. ಲೇಖನಗಳನ್ನು, ಸುದ್ದಿಗಳನ್ನು ಮತ್ತು ಜಾಹೀರಾತುಗಳನ್ನು ಪತ್ರಿಕೆಯ ಮೂಲ ಚಿಂತನೆಗೆ ಅನುಗುಣವಾಗಿ ಸೂಕ್ತ ಮಾರ್ಪಾಡು ಮಾಡಿಕೊಳ್ಳುವ ಅಧಿಕಾರ ಸಂಪಾದಕ ಮಂಡಳಿಗಿದೆ. -ಸಂಪಾದಕ ಮಂಡಳಿ

## ಚಿಂತನ


'ಆನೆ ನಡೆದದ್ದೇ ದಾರಿ' ಹೀಗೊಂದು ಆಡು ಮಾತಿದೆ. ರಾಜಕಾರಣಿಗಳೂ ಕೆಲವೊಮ್ಮೆ ಇಂತಹ ಆನೆಯ ಹೆಜ್ಜೆ ಯನ್ನಿಟ್ಟು ಮುನ್ನಡೆಯುವುದೂ ಇದ್ದೇ ಇದೆ. ಆದರೆ ಈ ನಡೆಯಿಂದ ಮುಂದಾಗುವ ಪರಿಣಾಮಗಳ ಬಗ್ಗೆಯೂ ಯೋಚನೆ ಮಾಡಬೇಕಷ್ಟೇ.

ತಮಿಳ್ನಾಡು ಮುಖ್ಯಮಂತ್ರಿಗೆ ತಾವು 18 ವರ್ಷಗಳ ಹಿಂದೆ ಅಧಿಕಾರದಲ್ಲಿದ್ದಾಗ ಯಾವ ರೀತಿಯ ನಡೆ ಇಟ್ಟಿದ್ದೇವೆ? ಇದರಿಂದ ಮುಂದೇನಾದರೂ ತೊಂದರೆ ಯಾದೀತೇ? ಎಂಬ ಯೋಚನೆ ಇಲ್ಲದೆ ಮಾಡಿದ ಅಪರಾಧಕ್ಕಾಗಿ ಈಗ ಅಧಿಕಾರ ತ್ಯಾಗ ಮಾತ್ರವಲ್ಲದೆ ಕಾರಾಗೃಹ ಸೇರಬೇಕಾಗಿ ಬಂದುದೂ, ಆ ಮೂಲಕ ತಮ್ಮ ರಾಜಕೀಯ ಬದುಕನ್ನೇ ಬಲಿಯಾಗಿಸಿಕೊಂಡಿರುವುದೂ ಈಗ ಎಲ್ಲರಿಗೂ ತಿಳಿದ ವಿಚಾರ.

ಈ ಹಿಂದೆ ಬಿಹಾರ, ಮಧ್ಯಪ್ರದೇಶ, ಕರ್ನಾಟಕದ ಮುಖ್ಯಮಂತ್ರಿಗಳೂ ಬೇರೆ ಬೇರೆ ಪ್ರಕರಣಗಳಿಗಾಗಿ ಸೆರೆವಾಸ ಅನುಭವಿಸಿದ್ದರೂ ಇವರಂತೆ ತಮ್ಮ ರಾಜಕೀಯ ಭವಿಷ್ಯಕ್ಕೇ ಕೊಳ್ಳಿ ಇಟ್ಟುಕೊಂಡಿಲ್ಲ. ಇದೀಗ ಈ ಪ್ರಕರಣವು ಇನ್ನೂ ಮುಂದಿನ ರಾಜಕೀಯ ಧುರೀಣರಿಗೆ ಒಂದು ವಿಧದ ಪಾಠವಾಗ ಬಲ್ಲುದು. ಅಧಿಕಾರದಲ್ಲಿದ್ದಾಗ ಮನ ಬಂದಂತೆ ವರ್ತಿಸಿ, ಸ್ವಜನ ಪಕ್ಷಪಾತ, ಅಕ್ರಮ ಸಂಪಾದನೆ ಮೊದಲಾದುವು ಗಳಿಂದ ದೇಶಕ್ಕೆ, ದೇಶದ ಪ್ರಜೆಗಳಿಗೆ ನಷ್ಟವುಂಟುಮಾಡುವ ಪ್ರವೃತ್ತಿಯನ್ನು ಇನ್ನಾದರೂ ನಮ್ಮ ಈ ರಾಜಕಾರಣಿಗಳು ಕೈ ಬಿಡಲಿ.

ಕೇವಲ ರಾಜಕಾರಣಿಗಳಷ್ಟೇ ಅಲ್ಲ; ಅಧಿಕಾರವುಳ್ಳ ಬಹುಜನರು ಈ ರೀತಿ ವರ್ತಿಸುವುದನ್ನು ನಮ್ಮ ಸುತ್ತ ಮುತ್ತಲೂ ನೋಡುತ್ತಿದ್ದೇವೆ. ಅಲ್ಲದೆ ಈ ಅಧಿಕಾರ ವನ್ನುಪಯೋಗಿಸಿ ಭ್ರಷ್ಟಾಚಾರ, ಸ್ವಲಾಭದ ಚಿಂತನೆ ಮಾಡುವ ಭ್ರಷ್ಟ ಅಧಿಕಾರಿಗಳು ನಮ್ಮೆಲ್ಲಾ ಸರಕಾರಿ ಕಛೇರಿಗಳಲ್ಲಿಯೂ, ಸಂಘ ಸಂಸ್ಥೆಗಳಲ್ಲಿಯೂ ಮೆರೆಯುತ್ತಿ ದ್ದಾರೆ. ಒಂದಲ್ಲ ಒಂದು ದಿನ ಇವರಿಗೂ ಇದೇ ರೀತಿಯ ಶಿಕ್ಷೆ, ನ್ಯಾಯಾಲಯ ದಿಂದ ಅಲ್ಲದಿದ್ದರೆ, ದೇವರ ನ್ಯಾಯಾಲ ಯದಿಂದಲಾದರೂ ಬರಬಹುದು ಎನ್ನುವುದನ್ನು ತಿಳಿದು ಕೊಳ್ಳಲಿ.

# ಕನ್ನಡ ಕವಿಕಾವ್ಯ ಪರಿಚಯ-೧೧ : ಷಟ್ಪದಿ ಕವಿ ರಾಘವಾಂಕ




- ಹರಿದಾಸ ಮ.ನಾ.ಹೆಬ್ಬಾರ
ಎಂ.ಎ., ಬಿ.ಎಡ್.

'ಷಟ್ಪದಿ' ಯೆಂಬುದು ಅಚ್ಚಗನ್ನಡದ ಛಂದಸ್ಸಾಗಿದೆ. ಕವಿ ರಾಘವಾಂಕನಿಗಿಂತ ಮೊದಲು ಯಾವನೇ ಕವಿ ಷಟ್ಪದಿಗಳನ್ನು ಬಳಸಿಕೊಂಡು ಕಾವ್ಯವನ್ನು ರಚಿಸಿದ ಉದಾಹರಣೆಗಳಿಲ್ಲ. ಇವನು 'ವಾರ್ಧಕ' ಎಂಬ ದೀರ್ಘ ಷಟ್ಪದಿಗಳನ್ನು ಬಳಸಿಕೊಂಡು ಅದರಲ್ಲಿಯೇ ತನ್ನ ಎಲ್ಲಾ ಕೃತಿಗಳನ್ನು ರಚಿಸಿರುವನು. ಮೊದಲ ಚರಣದಲ್ಲಿ ಐದು ಮಾತ್ರೆಗಳ ನಾಲ್ಕು ಗಣಗಳಿದ್ದರೆ ಅದು ವಾರ್ಧಕ ಷಟ್ಪದಿ ಎನಿಸುವುದು. ಕನ್ನಡದ ಆರು ಪ್ರಖ್ಯಾತ ಷಟ್ಪದಿಗಳಲ್ಲಿ ಇದು ಕೊನೆಯದು ಮತ್ತು ದೀರ್ಘವಾದುದು. ಹೀಗೆ ತನ್ನೆಲ್ಲಾ ಕೃತಿಗಳಲ್ಲಿ ಷಟ್ಪದಿಗಳನ್ನು ಯಶಸ್ವಿ ಯಾಗಿಯೂ ಪರಿಣಾಮಕಾರಿಯಾಗಿಯೂ ಈತನು ಬಳಸಿಕೊಂಡು ಕಾವ್ಯಗಳನ್ನು ರಚಿಸಿದುದರಿಂದ ಇವನನ್ನು 'ಷಟ್ಪದಿ ಬ್ರಹ್ಮ' ಎನ್ನಲಾಗುತ್ತಿದೆ. ಹಾಗೆಂದು ಈತನು ಷಟ್ಪದಿಯನ್ನು ನಿರ್ಮಿಸಿದವನಲ್ಲ. ಈತನ ಕಾಲದವರೆಗೆ ವಿಶೇಷವಾಗಿ ಪ್ರೌಢ ಕಾವ್ಯದಲ್ಲಿ ಷಟ್ಪದಿಯು ಪ್ರಚಾರಕ್ಕೆ ಬಂದಿರಲಿಲ್ಲ. ಇವನಿಗಿಂತ ಮೊದಲು ಷಟ್ಪದಿ ಕಾವ್ಯಗಳನ್ನು ರಚಿಸಿದ ಕವಿಗಳಿದ್ದರೂ ಅವುಗಳು ಲಭ್ಯವಿಲ್ಲ. ಆದರೆ ರಾಘವಾಂಕನ ಕಾಲಕ್ಕಿಂತಲೂ ಹಿಂದೆ ಕನ್ನಡದಲ್ಲಿ ಷಟ್ಪದಿಗಳು ಇದ್ದವೆಂಬುದಕ್ಕೆ ನಾಗವರ್ಮನ 'ಛಂದೋಂಬುಧಿ'ಯಲ್ಲಿ ಉಲ್ಲೇಖವು ಸಿಗುತ್ತದೆ. ರಾಘವಾಂಕನ ಗುರುವೂ, ಸೋದರ ಮಾವನೂ ಆದ ಹರಿಹರನು ತನ್ನ'ರಗಳೆ' ಕಾವ್ಯಗಳಲ್ಲಿ ಒಂದು ಪಾದದಲ್ಲಿ ಇಪ್ಪತ್ತು ಮಾತ್ರೆಗಳಿರುವ 'ರಗಳೆ'ಯನ್ನು ತನ್ನ'ಬಸವರಾಜ ದೇವರ ರಗಳೆ' ಎಂಬ ಕಾವ್ಯದಲ್ಲಿ ಬಳಸಿರುವನು. ಇದನ್ನೇ 'ಲಲಿತ ರಗಳೆ' ಎಂದು ಕರೆಯಲಾಗಿದ್ದು, ಮುಂದೆ ಕನ್ನಡದ ರಾಷ್ಟ್ರಕವಿ ಕುವೆಂಪುರವರು ಇದನ್ನೇ ಉಪಯೋಗಿಸಿಕೊಂಡು ಇದಕ್ಕೆ 'ಮಹಾಛಂದಸ್ಸು' ಎಂಬ ಹೆಸರನ್ನು ಕೊಟ್ಟು ಇದರಲ್ಲೇ ತನ್ನ ಮಹಾ ಕಾವ್ಯ 'ರಾಮಾಯಣ ದರ್ಶನಂ'ನ್ನು ಬರೆದಿರುವರು. ವಾರ್ಧಕ ಷಟ್ಪದಿಯ ಒಂದು, ಎರಡು, ನಾಲ್ಕು ಮತ್ತು ಐದನೇ ಪಾದಗಳಲ್ಲಿ ಐದು ಮಾತ್ರೆಗಳ ನಾಲ್ಕು ಗಣಗಳಿದ್ದು, ಒಟ್ಟು ಇಪ್ಪತ್ತು ಮಾತ್ರೆಗಳಿವೆ. ಮೂರು ಮತ್ತು ಆರನೇ ಪಾದಗಳಲ್ಲಿ ಇದರ ಒಂದುವರೆ ಪಾಲಿನಷ್ಟು ಅಂದರೆ ಮೂವತ್ತು ಮಾತ್ರೆಗಳಿದ್ದು ಕೊನೆಯಲ್ಲಿ ಒಂದು ಗುರು ಇರುತ್ತದೆ. ಇದರಲ್ಲಿಯೇ ವಾರ್ಧಕದಂತೆಯೇ ಇಪ್ಪತ್ತು ಮಾತ್ರೆಗಳು, ಆದರೆ ನಾಲ್ಕು ಮಾತ್ರೆಗಳ ಐದು ಗಣಗಳಿದ್ದು ಇದನ್ನು ಷಟ್ಪದಿಯಾಗಿ ಬಳಸಿದರೆ ಇದುವೇ 'ಉದ್ದಂಡ ಷಟ್ಪದಿ' ಯೆನಿಸುವುದು. ರಾಘವಾಂಕನು ಇದನ್ನೂ ಬಳಸಿದ್ದಾನೆ. ಆದ್ದರಿಂದಲೇ ಈತನು 'ಷಟ್ಪದಿ ಬ್ರಹ್ಮ' ನೆಂಬ ಬಿರುದಿಗೆ ಪಾತ್ರನಾದನು.

**ರಾಘವಾಂಕ ಚರಿತ್ರೆ :** ಈತನು ಕುಂತಳ ದೇಶದಲ್ಲಿ ತುಂಗಭದ್ರಾ ತೀರದಲ್ಲಿರುವ ಪಂಪಾಪುರದಲ್ಲಿ ಹುಟ್ಟಿದನು. ಇದುವೇ ಈಗ 'ಹಂಪೆ' ಎಂದು ಹೆಸರಿಸಲ್ಪಡುತ್ತಿದೆ. ಮಹಾದೇವ ಭಟ್ಟ ಎಂಬವನು ಇವನ ತಂದೆ. ರುದ್ರಾಣಿಯು ಈತನ ತಾಯಿ. ಈ ರುದ್ರಾಣಿಯು ಮಹಾಕವಿ ಹರಿಹರನ ತಂಗಿಯಾಗಿದ್ದು, ಈತನು ಹರಿಹರನ ಸೋದರಳಿಯನಾಗಿದ್ದನು. ಇವನ ಸೋದರ ಮಾವನಾದ ಹರಿಹರ ಅಥವಾ ಹರಿಹರೇಶ್ವನೇ ಈತನ ಗುರುವಾಗಿದ್ದನು. ತನಗೆ ಕವಿತಾ ಶಕ್ತಿಯುಂಟಾದ ಮೇಲೆ ರಾಘವಾಂಕನು ವಿದ್ವಾಂಸರೆಲ್ಲರೂ ಮೆಚ್ಚುವಂತಹ ರೀತಿಯ 'ಹರಿಶ್ಚಂದ್ರ ಕಾವ್ಯ' ವನ್ನು ವಾರ್ಧಕ ಷಟ್ಪದಿಯಲ್ಲಿ ರಚಿಸಿದನು. ಇದನ್ನು ತನ್ನ ಒಡೆಯನಾದ ಅರಸ ದೇವರಾಜನ ಸಭೆಯಲ್ಲಿ ಓದಿದನು. ಸಾಮಾನ್ಯವಾಗಿ ಶಿವ ಮತ್ತು ಶಿವಶರಣರನ್ನು ಬಿಟ್ಟು ನರರನ್ನು ಸ್ತುತಿಸಿ ಕಾವ್ಯ ರಚಿಸುವ ಪರಿಪಾಠ ಆಗಿನ ಕಾಲದಲ್ಲಿ ವೀರಶೈವ ಕವಿಗಳಲ್ಲಿ ಇರಲಿಲ್ಲ. ರಾಘವಾಂಕನು ಸಾಮಾನ್ಯ ಮಾನವನಾದ ಹರಿಶ್ಚಂದ್ರನನ್ನು ಹೊಗಳಿ ಕಾವ್ಯ ಬರೆದುದಕ್ಕೆ ಕೋಪಗೊಂಡ ಅವನ ಗುರು ಹರಿಹರನು ರಾಘವಾಂಕನು ಕಾವ್ಯ ಓದಿದಾಗ ಅವನ ಕೆನ್ನೆಗೆ ಬಾರಿಸಿದನು. ಆಗ ಅವನ ಐದು ಹಲ್ಲುಗಳು ಮುರಿದು ಉದುರಿದುವಂತೆ. ಪರಿಣಾಮವಾಗಿ ಸೋಮನಾಥ ಚರಿತೆಯೇ ಮೊದಲಾದ ಇತರ ಐದು ಕಾವ್ಯಗಳನ್ನು ಬರೆದು ರಾಘವಾಂಕನು ತನ್ನ ಹಲ್ಲುಗಳನ್ನು ಪುನಃ ಪಡೆದನು ಎಂಬ ಕತೆಯಿದೆ. ಈತನಿಗೆ ಕವಿ ಶರಭ ಭೇರುಂಡ, ಉಭಯ ಕವಿ ಕಮಲ ರವಿ, ಪುರಾಣ ಕವಿ ಮೊದಲಾದ ಬಿರುದುಗಳಿದ್ದುವು. ನರಸಿಂಹ ಬಲ್ಲಾಳನ ಮಂತ್ರಿಯಾದ ಕೆರೆಯ ಪದ್ಮರಸನನ್ನು ನೋಡಲು ಹೊಯ್ಸಳನಗರಕ್ಕೆ ಹೋದನು.

(ಮುಂದುವರಿಯುವುದು)

## ಶ್ರೀಶಾರದಾ ವೇದಿಕೆಯ ಮಹಾಪೋಷಕರಾಗಿ
# ಶ್ರೀ ಎರ್ಮಾಳು ವಿಠಲ ರಾವ್



ಉಡುಪಿಯ ಚಿಟ್ಪಾಡಿಯ ಶ್ರೀನಿವಾಸ ನಗರದಲ್ಲಿ ವಾಸ್ತವ್ಯದಲ್ಲಿರುವ ಶ್ರೀ ವೈ. ವಿಠಲ ರಾವ್, ಇವರು ಉಡುಪಿ ತಾಲೂಕಿನ ಎರ್ಮಾಳು ಗ್ರಾಮದ ಕೀರ್ತಿಶೇಷ ಶ್ರೀ ವೈ. ನಾರಾಯಣ ರಾವ್ (ಶಿಕ್ಷಕರು ಹಾಗೂ ವ್ಯವಸಾಯಗಾರರು) ಮತ್ತು ಕೀರ್ತಿಶೇಷ ಲಕ್ಷ್ಮೀದೇವಿಯವರ ದ್ವಿತೀಯ ಪುತ್ರನಾಗಿ ಜನಿಸಿದರು. ಪ್ರೌಢ ಶಿಕ್ಷಣವನ್ನು ಅದಮಾರು ಪ್ರೌಢಶಾಲೆಯಲ್ಲಿ ಮುಗಿಸಿ, ಮುಲ್ಕಿಯ ವಿಜಯಾ ಕಾಲೇಜಿನಲ್ಲಿ ಬಿ.ಎಸ್ಸಿ ಪದವಿಯನ್ನು ಪಡೆದರು. ಪದವಿಯನ್ನು ಮುಗಿಸಿದ ಕೂಡಲೇ ಎಲ್.ಐ.ಸಿ. ಶಿವಮೊಗ್ಗ ಶಾಖೆಯಲ್ಲಿ ಉದ್ಯೋಗಕ್ಕೆ ಸೇರಿದರು. ಫೆಡರೇಷನ್ ಆಫ್ ಇಂಡಿಯನ್ ಇನ್ಸುರೆನ್ಸ್ ಇನ್ಸ್‌ಟಿಟ್ಯೂಟ್, ಬೊಂಬಾಯಿಯ ಇನ್ಸುರೆನ್ಸ್ ಇನ್ಸ್‌ಟಿಟ್ಯೂಟ್ ಪರೀಕ್ಷೆಯಲ್ಲಿ ಅತೀ ಕಡಿಮೆ ಅವಧಿಯಲ್ಲಿ ತೇರ್ಗಡೆ ಹೊಂದಿ ಫೆಲೋ ಆಫ್ ಇನ್ಸುರೆನ್ಸ್ ಇನ್ಸ್‌ಟಿಟ್ಯೂಟ್ (ಎಫ್.ಐ.ಐ) ಪದವಿ ಯನ್ನು ಪಡೆದರು. ಎಲ್.ಐ.ಸಿ. ಯ ವಿವಿಧ ಆಫೀಸ್‌ಗಳಲ್ಲಿ ದುಡಿದು, ಉಡುಪಿಯ ಎಲ್.ಐ.ಸಿ ವಿಭಾಗದಲ್ಲಿ ಅಸಿಸ್ಟೆಂಟ್ ಡಿವಿಜನಲ್ ಮ್ಯಾನೇಜರ್ ಆಗಿ ನಿವೃತ್ತಿ ಹೊಂದಿದರು. ಪ್ರಸ್ತುತ ಇವರು ಉಡುಪಿ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘದ ನಿರ್ದೇಶಕರಲ್ಲೊಬ್ಬ ರಾಗಿದ್ದು, ಇವರ ಪತ್ನಿ ಶ್ರೀಮತಿ ವೈ.ಪ್ರತಿಮಾ ವಿಠಲ ರಾವ್ ಅವರು ಉಡುಪಿ ಸ್ಥಾನಿಕ ದ್ರಾವಿಡ ಸಂಘದ ಮಹಿಳಾ ವೇದಿಕೆಯ ಹಿರಿಯ ಸದಸ್ಯರಾಗಿರುತ್ತಾರೆ. ಇವರ ಪುತ್ರಿ ಶ್ರೀಮತಿ ಪ್ರೀತಿ ಎಸ್.ರಾವ್ ಉಡುಪಿಯ ಡಾ.ಟಿ.ಎಂ.ಎ.ಪೈ ಶಿಕ್ಷಣ ಮಹಾವಿದ್ಯಾಲಯದಲ್ಲಿ ಉಪನ್ಯಾಸಕಿಯಾಗಿದ್ದು, ಉಡುಪಿ ಸ್ಥಾನಿಕ ದ್ರಾವಿಡ ಸಂಘದ ನಿರ್ದೇಶಕಿ ಹಾಗೂ ಮಹಿಳಾ ವೇದಿಕೆಯ ಸಂಚಾಲಕಿ ಯಾಗಿದ್ದಾರೆ. ಅಳಿಯ ಸಂತೋಷ್ ರಾವ್ ಮಣಿಪಾಲ ಎಂ.ಐ.ಟಿಯಲ್ಲಿ ಅಸಿಸ್ಟೆಂಟ್ ಪ್ರೊಫೆಸರ್ ಆಗಿದ್ದು ಉಡುಪಿ ಸ್ಥಾನಿಕ ದ್ರಾವಿಡ ಸಂಘದ ಯುವವೇದಿಕೆಯ ಅಧ್ಯಕ್ಷರಾಗಿದ್ದಾರೆ. ಮೊಮ್ಮಗಳಾದ ಕು.ಎಂ ಪ್ರೇರಣಾರಾವ್ ಮಣಿಪಾಲದ ಮಾಧವ ಕೃಪಾ ಶಾಲೆಯಲ್ಲಿ ಆರನೇ ತರಗತಿಯಲ್ಲಿ ಕಲಿಯುತ್ತಿದ್ದು ಭರತನಾಟ್ಯ, ಸಂಗೀತ ಹಾಗೂ ಚಿತ್ರಕಲೆಗಳಲ್ಲಿ ಪರಿಣಿತಿಯನ್ನು ಪಡೆಯುತ್ತಿದ್ದಾಳೆ.ಶ್ರೀಯುತ ವಿಠಲ ರಾಯರು ಶ್ರೀ ಶಾರದಾ ವೇದಿಕೆಯ ಮಹಾ ಪೋಷಕರಾಗಿ ಸಹಕರಿಸಿದ್ದಾರೆ.

ಇವರ ಈ ಕೊಡುಗೆಯನ್ನು ಶ್ರೀಶಾರದಾ ಬಳಗವು ಕೃತಜ್ಞತಾಪೂರ್ವಕ ವಾಗಿ ಸ್ವೀಕರಿಸಿ, ಅವರಿಗೆ ಹಾಗೂ ಅವರ ಸಂಸಾರಕ್ಕೆ ಶ್ರೀಶಾರದೆಯು ಮಂಗಳ ವನ್ನುಂಟುಮಾಡಲಿ ಎಂದು ಶುಭ ಹಾರೈಕೆ.

## ರಾಷ್ಟ್ರೀಯ ಕ್ರೀಡಾ ಪ್ರತಿಭೆ



**ಅಖಿಲಾ ಆರ್.ಎಸ್.**

ವಿದ್ಯಾಭಾರತಿ ರಾಷ್ಟ್ರೀಯ ವಾಲಿಬಾಲ್ ಪಂದ್ಯಾಟವು 2014ರ ಸಪ್ಟೆಂಬರ್ 12ರಿಂದ 15ರ ತನಕ ಮಧ್ಯಪ್ರದೇಶದ ಗ್ವಾಲಿಯರ್ ನಗರದಲ್ಲಿ ನಡೆಯಿತು. ಈ ಪಂದ್ಯಾಟದಲ್ಲಿ ದ.ಕ. ಜಿಲ್ಲಾ ಈಶ್ವರಮಂಗಲದ ಗಜಾನನ ಆಂಗ್ಲ ಮಾಧ್ಯಮ ಪ್ರೌಢಶಾಲೆಯ ಬಾಲಕಿಯರ ತಂಡವು ಕಂಚಿನ ಪದಕವನ್ನು ಗೆದ್ದಿರುತ್ತದೆ. ಈ ಶಾಲಾ ಬಾಲಕಿಯರ ತಂಡದಲ್ಲಿ ಅಖಿಲಾ ಆರ್.ಎಸ್.ಮೇರ್ಟ ಭಾಗವಹಿಸಿ ರುತ್ತಾರೆ. ಇವರು ಅಡೂರು ಚರಕಂಡ ಶ್ರೀ ರಾಧಾಕೃಷ್ಣ ಮೇರ್ಟ ಮತ್ತು ಶ್ರೀಲತಾ ಮೇರ್ಟ ದಂಪತಿಗಳ ಪುತ್ರಿಯಾಗಿದ್ದಾರೆ. ಕುಮಾರಿ ಅಖಿಲಾ ಆರ್.ಎಸ್. ಇವರ ಕ್ರೀಡಾ ಪ್ರತಿಭೆಯು ಇನ್ನಷ್ಟು ಎತ್ತರಕ್ಕೆ ಏರಲಿ ಎಂದು ಶ್ರೀಶಾರದಾ ಹಾರೈಕೆ.

**ಶ್ರೀಶಾರದಾ ವೇದಿಕೆಯ ಮಹಾ ಪೋಷಕರು :** ದಿ। ಅಂಬಲಪಾಡಿ ಕೃಷ್ಣ ರಾವ್, ಡಾ। ಪಿ. ವಿಠ್ಠಲ ರಾವ್ ಮಣಿಪಾಲ, ಕೆ. ರಮೇಶ ಶ್ಯಾನುಭಾಗ್ ಸತಾರ, ಟಿ. ಆರ್. ಶ್ಯಾನುಭಾಗ್ ಬೆಂಗಳೂರು, ನಳಿನಿ ಆರ್. ಶ್ಯಾನುಭಾಗ್ ಬೆಂಗಳೂರು, ದಿ। ಕುಂಜಾರು ವಿಠಲ ರಾವ್ ಮುಂಬೈ, ಶ್ಯಾಮರಾವ್ ಅಲೆವೂರು, ವೈ. ಮುರಳೀಕೃಷ್ಣ ರಾವ್ ಉಡುಪಿ, ಸಿ. ಸರ್ವೋತ್ತಮ ರಾವ್ ಚಿಟ್ಪಾಡಿ, ಎಂ. ಸದಾನಂದ ರಾವ್ ಚಿಟ್ಪಾಡಿ, ದಿ। ಡಾ। ವೈ. ಚಂದ್ರಶೇಖರ ರಾವ್ ಕುಕ್ಕಿಕಟ್ಟೆ, ಬಿ. ಎಂ.ಸಂಜೀವ ರಾವ್ ಮಂಗಳೂರು, ಎನ್.ಡಿ. ಜಗನ್ನಾಥ ರಾವ್ ಬೆಂಗಳೂರು, ಕೆ. ಬಿ. ರವಿಶಂಕರ್‌ರಾವ್ ಮಂಗಳೂರು, ಪಿ. ಆರ್. ಸದಾಶಿವ ರಾವ್ ಬೆಂಗಳೂರು, ಬೆಳ್ಮಣ್ ವಾಸುದೇವ ರಾವ್ ಉಡುಪಿ, ಕುಡುಪು ನಾರಾಯಣ ರಾವ್ ಸತಾರ, ಎ. ಕೃಷ್ಣಮೂರ್ತಿ ರಾವ್ ಆಳುಗ್ಗೇಲು, ಶ್ರೀಮತಿ ಸರೋಜಿನಿ ದೇವರಾವ್ ನಂದಿಕೂರು, ಡಾ। ಪರೀಕ ಗೋಪಾಲಕೃಷ್ಣರಾವ್ ಮಾರ್ಪಳ್ಳಿ ಉಡುಪಿ, ಕೆ. ಭಾಸ್ಕರರಾವ್ ಉಡುಪಿ, ಕೆ. ವೇಣುಗೋಪಾಲರಾವ್ ಅಂಬಲ್ಪಾಡಿ, ಬಿ. ಕೃಷ್ಣಮೂರ್ತಿರಾವ್ ಅಂಬಲ್ಪಾಡಿ, ಶ್ರೀಮತಿ ವಿಜಯಾ ಆರ್.ರಾವ್ ಮುಂಬಯಿ, ಪ್ರೊ। ತಂತ್ರಾಡಿ ನಾರಾಯಣ ಶ್ಯಾನುಭಾಗ್, ಶ್ರೀಮತಿ ಮಾಲತಿ ಶಿವರಾವ್ ಮಣಿಪಾಲ, ವೈ. ಶಂಕರನಾರಾಯಣರಾವ್ ಪಡುಬಿದ್ರಿ, ವೈ. ಮೋಹನ ರಾವ್ ಅಂಬಲಪಾಡಿ, ಬೆಳ್ಳೆ ಶ್ರೀನಿವಾಸ ರಾವ್ ಮುಂಬೈ, ಡಾ। ವೈ. ಸುದರ್ಶನ ರಾವ್ ಕುಕ್ಕಿಕಟ್ಟೆ, ಕಟ್ಟೆ ವೆಂಕಟ್ರಾವ್ ಪಲಿಮಾರು, ಮಟ್ಟು ದಿವಾಕರ ರಾವ್ ಮುಂಬಯಿ, ಕೆ.ಉಮೇಶ್ ರಾವ್ ಕುಡಾಲ್, ಕೆ.ವೆಂಕಟರಮಣರಾವ್ ಕುಡಾಲ್, ಕಡಂದಲೆ ಶ್ರೀಪತಿ ರಾವ್ ಅಧಿಕಾರಿ ಮುಂಬೈ, ಅಂಬಲ್ಪಾಡಿ ರಾಘವೇಂದ್ರ ರಾವ್ ಬೆಂಗಳೂರು, ಅದ್ಯಪಾಡಿ ವಸಂತ ಕುಮಾರ್, ಎಸ್.ಉಮೇಶ್ ರಾವ್ ಮಾಣಿಬೆಟ್ಟು, ಶ್ರೀಮತಿ ಸವಿತಾ ಮೋಹನ್ ರಾವ್ ಕಬ್ಯಾಡಿ, ಶ್ರೀ ಪ್ರಫುಲ್ಲಚಂದ್ರರಾವ್ ಉಡುಪಿ, ಶ್ರೀ ಕೃಷ್ಣಕುಮಾರ್‌ರಾವ್ ಮಟ್ಟು, ಚಿಟ್ಪಾಡಿ ಭುಜಂಗರಾವ್, ಕೋಲ್ವೆ ಗೋಪಾಲಕೃಷ್ಣ ರಾವ್, ಯು ಆರವಿಂದ ಕುಮಾರ್ ಮಣಿಪಾಲ, ಕಿಶೋರ್ ಭಾಸ್ಕರ್ ರಾವ್ ಮುಂಬಯಿ, ಶ್ರೀ ವೈ.ವಿಠಲ ರಾವ್

## ಶ್ರೀಶಾರದಾ ಕ್ರೆಡಿಟ್ ಕೋ ಆಪರೇಟಿವ್ ಸೊಸೈಟಿ (ನಿ)

# ವಾರ್ಷಿಕ ಮಹಾಸಭೆ

ಶ್ರೀಶಾರದಾ ಕ್ರೆಡಿಟ್ ಕೋ ಆಪರೇಟಿವ್ ಸೊಸೈಟಿ (ನಿ) ಇದರ 2013–2014ನೇ ಸಾಲಿನ ವಾರ್ಷಿಕ ಮಹಾಸಭೆಯು ದಿನಾಂಕ 21–09–2014ರಂದು ರವಿವಾರ ಬೆಳಿಗ್ಗೆ 11ಕ್ಕೆ ಭೂ–ವರಾಹ ಸಂಕೀರ್ಣದ ಸಭಾಂಗಣದಲ್ಲಿ ಸಂಘದ ಅಧ್ಯಕ್ಷರಾದ ಎಂ. ಸದಾನಂದ ರಾವ್‌ರವರ ಅಧ್ಯಕ್ಷತೆಯಲ್ಲಿ ನಡೆಯಿತು. ಕುಮಾರಿ ಶ್ರೇಯಾರವರ ಪ್ರಾರ್ಥನೆ ಯೊಂದಿಗೆ ಸಭೆಯು ಪ್ರಾರಂಭವಾಯಿತು. ಸದಸ್ಯರನ್ನು ಆತ್ಮೀಯವಾಗಿ ಸ್ವಾಗತಿಸಿದ ಅಧ್ಯಕ್ಷರು "ಇಂದಿಗೆ ಸತತ 11ನೇ ವರ್ಷದಲ್ಲಿ ಸಂಸ್ಥೆಯು ಲಾಭದಾಯಕವಾಗಿ ಮುನ್ನಡೆಯುತ್ತಿದೆ. ವರದಿ ಸಾಲಿನಲ್ಲಿ ಸಂಘವು ರೂ.7.25 ಕೋಟಿ ಠೇವಣಿ ಸಂಗ್ರಹಿಸಿ, ರೂ 6.16ಕೋಟಿ ಸಾಲ ವಿತರಿಸಿ, ರೂ.8.00 ಕೋಟಿ ದುಡಿಯುವ ಬಂಡವಾಳ ಹೊಂದಿದ್ದು, ವರ್ಷಾಂತ್ಯಕ್ಕೆ ರೂ.7.03 ಲಕ್ಷ ಲಾಭ ಗಳಿಸಿ ಸದಸ್ಯರಿಗೆ ಶೇ.12% ಡಿವಿಡೆಂಡ್ ನೀಡುತ್ತಿದ್ದೇವೆ" ಎಂದು ತಿಳಿಸಿದರು.

"ಕೇಂದ್ರ ಕಛೇರಿ ಮತ್ತು ಶಾಖೆಗಳು ತೃಪ್ತಿಕರವಾಗಿ ಕಾರ್ಯನಿರ್ವಹಿಸುತ್ತಿದ್ದು, ಸದ್ಯದಲ್ಲಿ ಕೋಟೇಶ್ವರದಲ್ಲಿ ಸಂಘದ ನೂತನ ಶಾಖೆಯನ್ನು ಪ್ರಾರಂಭಿಸುತ್ತಿದ್ದೇವೆ. ಪ್ರಸ್ತುತ ಸಾಲಿನಿಂದ ಸಂಘದ ಪ್ರಾಥಮಿಕ ಸದಸ್ಯರ ಮಕ್ಕಳ ಉನ್ನತ ಶಿಕ್ಷಣಕ್ಕಾಗಿ ಕಡಿಮೆ ಬಡ್ಡಿದರದಲ್ಲಿ ಸಾಲ ವಿತರಿಸುವ ನೂತನ ಯೋಜನೆಯನ್ನು ಹಾಕಿಕೊಂಡಿದ್ದೇವೆ. ಮುಂದಿನ ದಿನಗಳಲ್ಲಿ ಸಂಘದ ಅಭಿವೃದ್ಧಿಗೆ ಸದಸ್ಯರು ಹೆಚ್ಚಿನ ಸಹಕಾರವನ್ನು ನೀಡಬೇಕು" ಎಂದು ವಿವರ ನೀಡಿದರು.

ಸಂಘದ ಕಾರ್ಯದರ್ಶಿ ಪಟ್ಟಾಭಿರಾಮ ಎನ್.ಎಸ್. ಲೆಕ್ಕ ಪತ್ರಿಕೆಗಳ ವರದಿ ಮಂಡಿಸಿದರು. ವೇದಿಕೆಯಲ್ಲಿ ಉಪಾಧ್ಯಕ್ಷ ಕೆ.ವೇಣುಗೋಪಾಲರಾವ್, ಯು. ಪ್ರಫುಲ್ಲಚಂದ್ರ, ಯು.ಅರವಿಂದ ಕುಮಾರ್, ವೈ.ಮುರಲೀಕೃಷ್ಣ ರಾವ್, ವೈ.ಪ್ರಕಾಶ್ ಕುಮಾರ್. ಕೆ.ಮಂಜುನಾಥ ಹೆಬ್ಬಾರ್, ಗೀತಾ.ಕೆ.ರಾವ್ ಉಪಸ್ಥಿತರಿದ್ದರು. ಕೊನೆಯಲ್ಲಿ ಶಾಖಾ ವ್ಯವಸ್ಥಾಪಕರಾದ ಕೆ.ವಿಶ್ವನಾಥ ರಾವ್ ಧನ್ಯವಾದವನ್ನು ಸಮರ್ಪಿಸಿದರು.

ನಂತರ ಸದಸ್ಯರೆಲ್ಲರೂ ಮಧ್ಯಾಹ್ನ ಭೋಜನವನ್ನು ಸ್ವೀಕರಿಸಿದರು.

## ವಿಶ್ವವಿದ್ಯಾನಿಲಯಕ್ಕೆ ಪ್ರಥಮ ಸ್ಥಾನ



ಕು। ಶುಭ ಎ.ಎಸ್.

ಕಾಸರಗೋಡು ತಾಲೂಕು ಅಡೂರು ಶಿವಬ್ರಾಹ್ಮಣ ಸಂಘದ ಮಾಜಿ ಕಾರ್ಯದರ್ಶಿ ಅಡೂರು ಶ್ರೀಧರರಾಯರ ಪುತ್ರ ಡಾ। ಸಂತೋಷ್ ಮತ್ತು ಗೀತಾ ದಂಪತಿಗಳ ಸುಪುತ್ರಿ **ಕು। ಶುಭ ಎ.ಎಸ್.** Horticulture BSc 1st year ನಲ್ಲಿ Shimoga Universityಗೆ ಪ್ರಥಮ ಸ್ಥಾನ ಪಡೆದಿದ್ದು ವಾರ್ಷಿಕ ಪ್ರತಿಭಾವಂತ ವಿದ್ಯಾರ್ಥಿಗಳ ವಿದ್ಯಾರ್ಥಿ ಸಹಾಯಧನದ Scholar ship ಪಡೆದಿರುತ್ತಾಳೆ. ಈಕೆಯ ಸಾಧನೆಗೆ ಶ್ರೀಶಾರದಾ ಅಭಿನಂದನೆಗಳು.

## ಉಡುಪಿಯಲ್ಲಿ ಸಂಭ್ರಮದ ನವರಾತ್ರಿ ಉತ್ಸವ

■...1ನೇ ಪುಟದಿಂದ

ಪುರಸ್ಕಾರದ ವಿವರಗಳನ್ನು ನೀಡಿದ ಸಂಘದ ನಿರ್ದೇಶಕರಾದ ಶ್ರೀ ಪ್ರಭಾಕರ ಭಂಡಿಯವರು ವಿಜೇತರನ್ನು ಕರೆಯುತ್ತಿದ್ದಂತೆ ಬಂದು ಅಧ್ಯಕ್ಷರ ಕೈಯಿಂದ ಉದಯಚಂದ್ರ ಪುರಸ್ಕಾರವನ್ನು ಸ್ವೀಕರಿಸಿದರು.

ಅನಂತರ ಅಂದಿನ ಸ್ಪರ್ಧೆಗಳ ವಿಜೇತರ ಪಟ್ಟಿಯನ್ನು ಸಂಘದ ನಿರ್ದೇಶಕರಾದ ಶ್ರೀ ಪ್ರಕಾಶ್ ಕೋಲ್ಪೆ ವಾಚಿಸಿದರು. ವೇದಿಕೆಯಲ್ಲಿದ್ದ ಗಣ್ಯರು ಬೇರೆ ಬೇರೆ ಸ್ಪರ್ಧೆಗಳ ಬಹುಮಾನ ವಿತರಣೆ ಮಾಡಿದರು.

### ವೈದ್ಯಕೀಯ ನೆರವು ವಿತರಣೆ

ಕುಂದಾಪುರ ತಾಲೂಕು ಮೂರೂರು ಕೋಣಿಯ ಫಲಾನುಭವಿಯೊಬ್ಬರಿಗೆ ಅವರ ಬೇಡಿಕೆಯಂತೆ ತನ್ನ ಪತ್ನಿಯ ವೈದ್ಯಕೀಯ ಚಿಕಿತ್ಸೆಗಾಗಿ ರೂ.10,000/–ದ ಬ್ಯಾಂಕ್ ಚೆಕ್‌ನ್ನು ಅವರಿಗೆ ವಿತರಿಸಿ, ಶೀಘ್ರ ಗುಣಮುಖರಾಗಲಿ ಎಂದು ಶುಭ ಹಾರೈಸಲಾಯಿತು.

ಕೊನೆಯಲ್ಲಿ ಕಾರ್ಯದರ್ಶಿ ಅರವಿಂದಕುಮಾರ್ ಧನ್ಯವಾದ ಸಲ್ಲಿಸಿದರು. ಕೃಷ್ಣಕುಮಾರ್ ರಾವ್ ಮಟ್ಟು ಕಾರ್ಯಕ್ರಮ ನಿರೂಪಿಸಿದರು. ಸಂಜೆ ಶ್ರೀಶಾರದಾ ಹವ್ಯಾಸಿ ಯಕ್ಷಗಾನ ಕಲಾವಿದರಿಂದ "ವೃಷಸೇನ ಕಾಳಗ–ಶಶಿಪ್ರಭಾ ಪರಿಣಯ" ಪ್ರಸಂಗಗಳ ಬಯಲಾಟವು ಜರಗಿತು.

## ಉದಯಚಂದ್ರ ಪ್ರತಿಭಾ ಪುರಸ್ಕಾರ

ಉದಯಚಂದ್ರ ಪ್ರತಿಭಾ ಪುರಸ್ಕಾರಕ್ಕಾಗಿ ಜಾಹೀರಾತುಗಳನ್ನು ಕಳೆದ ಎರಡು ತಿಂಗಳ ಶ್ರೀ ಶಾರದಾ ಪತ್ರಿಕೆಯಲ್ಲಿ ಪ್ರಕಟಿಸಿದ್ದರೂ ಸಾಕಷ್ಟು ನಮ್ಮ ಸಮಾಜದ ವಿದ್ಯಾರ್ಥಿಗಳು/ ಪೋಷಕರು ಆ ವಿಚಾರವನ್ನು ತಿಳಿದುಕೊಳ್ಳದೇ ಇರುವುದು ನಮ್ಮ ಗಮನಕ್ಕೆ ಬಂದಿರುವ ವಿಚಾರವಾಗಿದೆ. ಏಕೆಂದರೆ 80%ಕ್ಕಿಂತ ಹೆಚ್ಚು ಅಂಕ ಗಳಿಸಿದ ಎಸ್‌ಎಸ್‌ಎಲ್‌ಸಿ ಹಾಗೂ ಪಿಯುಸಿಯ (ಮೂರೂ ವಿಭಾಗದ) ವಿದ್ಯಾರ್ಥಿಗಳಿಗೆ ಈ ಪುರಸ್ಕಾರ ಲಭ್ಯವಿದ್ದರೂ ಕೇವಲ ಪಿಯುಸಿಯ ವಿಜ್ಞಾನ ಹಾಗೂ ವಾಣಿಜ್ಯ ವಿಭಾಗಗಳಿಗೆ ಮಾತ್ರ ಅರ್ಜಿಗಳು ಬಂದಿದ್ದು, ಕಲಾ ವಿಭಾಗಕ್ಕೆ ಸಂಬಂಧಪಟ್ಟಂತೆ ಒಂದೂ ಅರ್ಜಿಯೂ ಲಭ್ಯವಿಲ್ಲ. ಈ ಬಗ್ಗೆ ಮುಂದಿನ ದಿನಗಳಲ್ಲಿ ಸಮಾಜಬಾಂಧವರು ಗಮನಹರಿಸುವಂತೆ ವಿನಂತಿಸಲಾಗಿದೆ. ವಿಜಯದಶಮಿಯಂದು ಈ ಕೆಳಗಿನ ವಿದ್ಯಾರ್ಥಿಗಳಿಗೆ ಉದಯಚಂದ್ರ ಪುರಸ್ಕಾರ ನೀಡಿ ಗೌರವಿಸಲಾಯಿತು.

**ಎಸ್.ಎಸ್.ಎಲ್.ಸಿ. :**

1. **ಕು. ಪ್ರೀತಿ ಪ್ರಸಾದ್,** D/o ದೇವಿ ಪ್ರಸಾದ್, ಕಾರವಾರ

**ಪಿ.ಯು.ಸಿ. ವಾಣಿಜ್ಯ ವಿಭಾಗ :**

2. **ಕು। ವೈಷ್ಣವೀ ರಾವ್, ಮೈಸೂರು,** D/o ಕಿರಣ್ ಕುಮಾರ್, ಮಂಗಳೂರು

**ಪಿ.ಯು.ಸಿ. ವಿಜ್ಞಾನ ವಿಭಾಗ :**

3. **ಕು। ಪಲ್ಲವಿ ರಾವ್,** D/o ಮಂಜುನಾಥ ರಾವ್, ಸುರತ್ಕಲ್



## ಡಾ। ವೈ ರವೀಂದ್ರನಾಥ ರಾವ್ ಅವರ ಕುಡುಬಿ ಬೃಹತ್ ಸಮೀಕ್ಷಾ ವರದಿ



ಬ್ರಹ್ಮಾವರ : ಮಂಗಳೂರಿನ ವಿಶ್ವಕೊಂಕಣಿ ಕೇಂದ್ರದ ಯೋಜನೆಯಡಿ ಕರ್ನಾಟಕ ಸರ್ಕಾರದ ಆರ್ಥಿಕ ನೆರವಿನೊಂದಿಗೆ 2012–14ರ ಅವಧಿಯಲ್ಲಿ ಸಹಭಾಗಿತ್ವ ಸಂಶೋಧನಾ ವಿಧಾನವನ್ನು ಅಳವಡಿಸಿ ದ.ಕ ಮತ್ತು ಉಡುಪಿ ಜಿಲ್ಲೆಗಳಲ್ಲಿ ನಡೆಸಲಾದ 5372 ಕುಡುಬಿ ಜನಾಂಗದ ಕುಟುಂಬಗಳ "ಬೃಹತ್ ಸಮಾಜೋ–ಆರ್ಥಿಕ ಸಮೀಕ್ಷೆ"ಯ ವರದಿಯನ್ನು, ಯೋಜನೆಯ ನಿರ್ದೇಶಕ, ಬ್ರಹ್ಮಾವರ ಎಸ್.ಎಂ.ಎಸ್.ಕಾಲೇಜಿನ ಉಪಪ್ರಾಂಶುಪಾಲ ಮತ್ತು ಸಮಾಜಶಾಸ್ತ್ರ ವಿಭಾಗದ ಮುಖ್ಯಸ್ಥರಾದ ಡಾ।ವೈ.ರವೀಂದ್ರನಾಥ ರಾವ್ ಸಿದ್ಧಪಡಿಸಿದ್ದು, ವಿಶ್ವಕೊಂಕಣಿ ಕೇಂದ್ರದಿಂದ ಪ್ರಕಟಗೊಂಡಿದೆ. ಈ ವರದಿಯಲ್ಲಿ ಕುಡುಬಿ ಜನಾಂಗದ ಅಭಿವೃದ್ಧಿಗಾಗಿ ಪ್ರಮುಖ ಶಿಫಾರಸ್ಸುಗಳನ್ನು ನೀಡಲಾಗಿದ್ದು, ಇದನ್ನು ಕೇಂದ್ರ ಸಂಸ್ಕೃತಿ ಮತ್ತು ಪ್ರವಾಸೋದ್ಯಮ ಸಚಿವ ಮಾನ್ಯ ಶ್ರೀಪಾದ ನಾಯಕ್ ಇತ್ತೀಚೆಗೆ ಮಂಗಳೂರಿನಲ್ಲಿ ಬಿಡುಗಡೆಗೊಳಿಸಿದರು.

ದೇವಿಕೃಪಾ ಏಜೆನ್ಸೀಸ್, ನಂದಿಕೂರು
ಫೋನ್ : 2556536 (R), 2555466 (O), Mobile : 9845149521
ಶಾಂತಲಾ 100 ಅಗರ್ ಬತ್ತಿಯ ಮುಖ್ಯ ವಿತರಣೆಗಾರರು ಹಾಗೂ ಕರ್ಪೂರ, ಲೋಬಾನ ಮುಂತಾದವುಗಳ ರಖಂ ವ್ಯಾಪಾರಸ್ಥರು.
ಪ್ರೊ। ಎಸ್. ಜನಾರ್ದನ್ ರಾವ್
ದೇವಿಕೃಪಾ, ನಂದಿಕೂರು, ಉಡುಪಿ ತಾಲೂಕು



ಎಮ್. ದೇವಾನಂದ್ ಭಟ್
Cell : 9845644556
9483913344
ಶೋಭಾ ಡಿಜಿಟಲ್
ಸ್ಟುಡಿಯೋ & ವೀಡಿಯೊ
ಬೆಳ್ವಾಯಿ–574213 (08258)-276177 (O)
ಮೂಡಬಿದ್ರಿ ಲಾವಂತ ಕಾಂಪ್ಲೆಕ್ಸ್ 9901995655
ಎಡಪದವು – 574 164 (0824)-2256374 (O) ಮಂಗಳೂರು, ದ.ಕ.
ಸಮಾಜ ಬಾಂಧವರಿಗೆ ರಿಯಾಯಿತಿಯನ್ನಿತ್ತು ಪ್ರೋತ್ಸಾಹಿಸಲಾಗುವುದು

RAJESH POWER PRESS
PRINTERS & PUBLISHERS
DARBE, PUTTUR, DA. KA. - 574 202.
KARNATAKA STATE, SOUTH INDIA.
Ph : (08251) 231696, 231697 & 322386
E-mail : msraghunathrao@hotmail.com
the right Place for the right customers
QUALITY FIRST AND ALWAYS

# ಅಮೇರಿಕ ಪ್ರವಾಸ

–ಮಹಾಲಕ್ಷ್ಮೀ ಶಾನುಭಾಗ್, ಅಂಬಲಪಾಡಿ.

ನಮ್ಮ ಬಹುದಿನದ ಕನಸಾಗಿದ್ದ ಅಮೇರಿಕಾ ಪ್ರವಾಸವು ಬೆಂಗಳೂರಿನಿಂದ ತಾ.16-05-2014ರಂದು ಪ್ರಾರಂಭವಾಯಿತು. 'ಅಮೇರಿಕನ್ ಮೆಮೋರೀಸ್' ನಾಮಾಂಕಿತ ಪೂರ್ವ ಮತ್ತು ಪಶ್ಚಿಮ ಅಮೇರಿಕಾದ 15 ದಿನಗಳ ಈ ಪ್ರವಾಸವನ್ನು ಮುಂಬೈಯ "Vacations Exotica" ಸಂಸ್ಥೆಯವರು ಮಂಗಳೂರಿನ ನಿರ್ಮಲಾ ಟ್ರಾವೆಲ್ಸ್‌ನವರ ಸಹಯೋಗದೊಂದಿಗೆ ಆಯೋಜಿಸಿದ್ದರು. ಈ ಪ್ರವಾಸದಲ್ಲಿ ಒಟ್ಟು 25 ಮಂದಿ ಇದ್ದು ಬೆಂಗಳೂರಿನಿಂದ 12 ಜನ ಹೋಗಿದ್ದೆವು.

ನಾವು ಮೇ 16 ರಂದು ಬೆಳಗ್ಗೆ 10-30ಕ್ಕೆ ಬೆಂಗಳೂರಿನಿಂದ ಎಮಿರೇಟ್ಸ್ ಬೋಯಿಂಗ್ ವಿಮಾನದಲ್ಲಿ ಹೊರಟು ಮಧ್ಯಾಹ್ನ 12.50ಕ್ಕೆ ದುಬೈಯನ್ನು ತಲುಪಿದೆವು. ನಮಗೆ ದುಬೈಯಿಂದ ನ್ಯೂಯಾರ್ಕ್‌ಗೆ ಹೋಗಲು ವಿಮಾನ ಮರುದಿನ ಮುಂಜಾನೆ 2.50ಕ್ಕೆ ಇತ್ತು. ದುಬೈನಲ್ಲಿ ಈ ಸಮಯದಲ್ಲಿ ತಂಗಲು ಎಮಿರೇಟ್ಸ್ ಸಂಸ್ಥೆಯ ಹೋಟೆಲ್ ಇದ್ದು ಊಟೋಪಚಾರದ ವ್ಯವಸ್ಥೆಯೂ ಇತ್ತು. ಮುಂದಿನ ಪ್ರಯಾಣಕ್ಕೆ ಬಹಳಷ್ಟು ಸಮಯವಿದ್ದುದರಿಂದ ನಾವೆಲ್ಲರೂ ಸೇರಿ ದುಬೈ ನಗರ ವೀಕ್ಷಣೆಗೆ ಪ್ರತ್ಯೇಕ ವಾಹನದಲ್ಲಿ ಹೊರಟೆವು. ಆ ದಿನ ರಾತ್ರಿ 9 ರವರೆಗೆ ದುಬೈಯನ್ನು ಸುತ್ತಾಡಿ 'ಬುರ್ಜ್ ಖಲೀಫಾ' ದುಬೈ ಮಾಲ್, ದುಬೈ ಫೌಂಟೇನ್, ಬುರ್ಜ್ ಅಲ್ ಅರಬ್ ಜುಮೀರಾಹ್ ಬೀಚ್ ಹೋಟೆಲ್' ಹಾಗೂ ಮಸೀದಿಗಳನ್ನು ನೋಡಿದೆವು. ಸಂಯುಕ್ತ ಅರಬ್ ಸಂಸ್ಥಾನದ (ಯು.ಎ.ಇ) ಪುಟ್ಟ ಸಂಸ್ಥಾನವಾದ ದುಬೈ ಸಾಧಿಸಿದ ದಾಖಲೆಗಳು ಅನೇಕ. ವಿಶ್ವದ ಪ್ರಥಮ ಚಾಲಕ ರಹಿತ ರೈಲು (ದುಬೈ ಮೆಟ್ರೋ ರೈಲು), ವಿಶ್ವದ ಏಕೈಕ ಸಪ್ತತಾರಾ ಹೋಟೆಲ್ ಬುರ್ಜ್ ಅಲ್ ಅರಬ್ ಮೊದಲಾದ ದಾಖಲೆಗಳಿಂದ ದುಬೈ ವಿಶ್ವವಿಖ್ಯಾತಿ ಹೊಂದಿದೆ. ಈಗ ಗಗನಚುಂಬಿ ಕಟ್ಟಡಗಳಿಂದಾಗಿ ಪ್ರವಾಸಿಗರನ್ನು ಆಕರ್ಷಿಸುತ್ತಿದೆ. ಅದರಲ್ಲೂ ಮುಖ್ಯವಾಗಿ "ಬುರ್ಜ್ ಖಲೀಫಾ' ಜಗತ್ತಿನ ಅತೀ ಎತ್ತರದ ಕಟ್ಟಡವೆಂಬ ಖ್ಯಾತಿಯನ್ನು ಹೊಂದಿದೆ. ಈ ಕಟ್ಟಡವು 160 ಅಂತಸ್ತುಗಳನ್ನು ಹೊಂದಿದ್ದು 2717 ಅಡಿ ಎತ್ತರವನ್ನು ಹೊಂದಿದೆ. 5 ವರ್ಷಗಳಲ್ಲಿ ಏಳೂವರೆ ಸಾವಿರ ಕೋಟಿ ರೂ ವೆಚ್ಚದಲ್ಲಿ ಕಟ್ಟಿದ ಅತ್ಯದ್ಭುತ ವಾಸ್ತು ವಿನ್ಯಾಸದ ಕಟ್ಟಡವಾದ ಈ 'ಬುರ್ಜ್ ಖಲೀಫಾ'ವನ್ನು ವರ್ಣನೆ ಮಾಡಲು ಪದಗಳೇ ನಿಲುಕದೇನೋ!

ದುಬೈನ ಇನ್ನೊಂದು ವಿಶೇಷ ಆಕರ್ಷಣೆ ದುಬೈ ಕಾರಂಜಿ (ದುಬೈ ಫೌಂಟೇನ್). 800 ಮಿಲಿಯನ್ ದಿರ್ಹಾಂ ವೆಚ್ಚದಲ್ಲಿ ನಿರ್ಮಿಸಲಾಗಿರುವ ಈ ಕಾರಂಜಿ ಅತ್ಯಂತ ಮನಮೋಹಕ, ಅತ್ಯಂತ ಸುಂದರ ಹಾಗೂ ವಿಶ್ವದಲ್ಲೇ ಅದ್ವಿತೀಯ. ವಿಶ್ವದ ಅತ್ಯಂತ ದೊಡ್ಡ ವಾಣಿಜ್ಯ ಮಳಿಗೆಯಾದ ದುಬೈಮಾಲ್‌ನೊಂದಿಗೆ ದುಬೈ ಕಾರಂಜಿಯೂ ಉದ್ಘಾಟನೆಯಾಯಿತು. ಬುರ್ಜ್ ಖಲೀಫಾ, ದ ಪ್ಯಾಲೇಸ್ ಹೋಟೆಲ್, ಸೂಕ್ ಅಲ್ ಬಹಾರ್ ಹಾಗೂ ಅಡ್ರೆಸ್ ಡೌನ್ ಟೌನ್ ಬುರ್ಜ್ ದುಬೈ ಕಟ್ಟಡಗಳ ನಡುವೆ ಸ್ಥಿತಗೊಳಿಸಲಾಗಿರುವ ಈ ಕಾರಂಜಿಯನ್ನು ಪ್ರತಿದಿನ ಸಾವಿರಾರು ಜನರು ನೋಡಿ ಆನಂದಿಸುತ್ತಿದ್ದಾರೆ. ಸಾವಿರಾರು ಚಿಕ್ಕ ಪುಟ್ಟ ಕಾರಂಜಿಗಳು ಸಂಗೀತಕ್ಕೆ ತಕ್ಕಂತೆ ನರ್ತಿಸುತ್ತಾ ನೀರನ್ನು ಚಿಮ್ಮಿಸುತ್ತಾ ವೀಕ್ಷಕರನ್ನು ನಿಬ್ಬೆರಗಾಗಿಸುತ್ತವೆ.

ದುಬೈಯಿಂದ ಮುಂಜಾನೆ 2.50ಕ್ಕೆ ಮತ್ತೆ ಎಮಿರೇಟ್ಸ್ ಬೋಯಿಂಗ್ ವಿಮಾನದಲ್ಲಿ ನ್ಯೂಯಾರ್ಕ್‌ಗೆ ನಮ್ಮ ಪ್ರಯಾಣ ಆರಂಭವಾಯಿತು. ಅರ್ಧ ನಿದ್ರೆ, ಅರ್ಧ ಎಚ್ಚರದಲ್ಲಿ ವಿಮಾನದಲ್ಲಿ ಕೊಟ್ಟ ತಿಂಡಿ ತೀರ್ಥಗಳನ್ನು ಸೇವಿಸಿ 14 ತಾಸುಗಳ ಪ್ರಯಾಣದ ಬಳಿಕ ನ್ಯೂಯಾರ್ಕ್‌ನ ವಿಮಾನ ನಿಲ್ದಾಣದಲ್ಲಿ ಇಳಿದೆವು. ನಾವು ಅಲ್ಲಿ ತಲುಪಿದಾಗ ನಮ್ಮ ಪ್ರವಾಸದ ಟೂರ್ ಮೇನೇಜರ್ ಮೂಲ ಉಡುಪಿಯವರೇ ಆದ "ಲಾರೆನ್ಸ್ ಮೌರಿಸ್" ನಮಗಾಗಿ ಕಾಯುತ್ತಿದ್ದರು. ಬಳಿಕ (ದಿ)ಡೆಲ್ಲಿ ಮುಂಬೈಯಿಂದ ಬಂದ ಪ್ರವಾಸಿಗರೂ ಅಲ್ಲಿ ನಮ್ಮನ್ನು ಸೇರಿಕೊಂಡರು. ಒಟ್ಟು 25 ಜನ Airport ನಿಂದ "ನ್ಯೂಜರ್ಸಿ"ಗೆ ಪ್ರಯಾಣಿಸಿ ಹೋಟೆಲ್ Edison ನಲ್ಲಿ ತಂಗಿದೆವು. ನ್ಯೂಜರ್ಸಿಯಲ್ಲಿ ತುಂಬಾ ಜನ ಕನ್ನಡಿಗರೇ ಇದ್ದಾರೆ. ರಾತ್ರಿ ಊಟವಾದ ಬಳಿಕ ನಾವು ನ್ಯೂಯಾರ್ಕ್‌ನ 'Times Squareí ವೀಕ್ಷಣೆಗೆ ಹೊರಟೆವು. ಬಣ್ಣ ಬಣ್ಣದ ಪ್ರಖರ ವಿದ್ಯುದ್ದೀಪಗಳಿಂದ ಇಲ್ಲಿ ಕಟ್ಟಡಗಳು ಬೆಳಗುತ್ತಿದ್ದು ಆ ಸುಂದರ ದೃಶ್ಯವನ್ನು ವರ್ಣಿಸಲು ಅಸಾಧ್ಯ. ಆದರೂ ಅಲ್ಲಿ ಕೆಲವು ಕಡೆ ಫ್ಯಾಶನ್‌ನ ಹೆಸರಿನಲ್ಲಿ ಅಶ್ಲೀಲ ದೇಹ ಪ್ರದರ್ಶನವೂ ಇತ್ತು.

ಮರುದಿನ ಬೆಳಗ್ಗೆ ಉಪಾಹಾರದ ಬಳಿಕ ನಾವು ಅಮೇರಿಕದ ಸ್ವಾತಂತ್ರ್ಯದ ಸಂಕೇತವಾದ ಪ್ರಸಿದ್ಧ "Statue of Libertyî ನೋಡಲು ಹೋದೆವು. ಈ ಬೃಹತ್ ಪ್ರತಿಮೆಯನ್ನು ಫ್ರಾನ್ಸಿನ ಜನರು ಅಮೇರಿಕಾಗೆ ಉಡುಗೊರೆಯಾಗಿ ಕೊಟ್ಟದ್ದು. ಈ ಪ್ರತಿಮೆಯನ್ನು ಹಿನ್ನೀರಿನಿಂದ ಆವೃತವಾದ ವಿಶಾಲವಾದ ' ELLISî ದ್ವೀಪದಲ್ಲಿ ತುಂಬಾ ಎತ್ತರದಲ್ಲಿ ಸ್ಥಾಪಿಸಿದ್ದಾರೆ. ಸ್ವಾತಂತ್ರ್ಯ ಜ್ಯೋತಿಯನ್ನು ಬಲಗೈಯಲ್ಲಿ ಎತ್ತಿ ಹಿಡಿದ 305 ಅಡಿ ಎತ್ತರದ ಈ ಮೂರ್ತಿಯು ಹಸಿರುಬಣ್ಣದಿಂದ ಕೂಡಿದ್ದು ತುಂಬಾ ದೂರದಿಂದಲೂ ಕಾಣುತ್ತದೆ. ಈ ದ್ವೀಪಕ್ಕೆ ಹೋಗಿ ಬರಲು ಬೋಟಿನ ವ್ಯವಸ್ಥೆ ತುಂಬಾ ಅಚ್ಚುಕಟ್ಟಾಗಿದೆ.





ಬಳಿಕ ನಾವು ಪ್ರಸಿದ್ಧ "Empire State Buildingî ನ ವೀಕ್ಷಣೆಗೆ ತೆರಳಿದೆವು. ಇದು ನ್ಯೂಯಾರ್ಕ್‌ನ ಅತಿದೊಡ್ಡ ಮತ್ತು ಎತ್ತರದ ಗಗನಚುಂಬಿ ಕಟ್ಟಡವಾಗಿದ್ದು ಇದರ 86ನೇ ಮಹಡಿಯಲ್ಲಿ ವೀಕ್ಷಣಾಲಯ ಇದೆ. ಇಲ್ಲಿಂದ ಕಾಣುವ ನ್ಯೂಯಾರ್ಕ್ ನಗರದ ಗಗನಚುಂಬಿ ಕಟ್ಟಡಗಳ ನೋಟ ತುಂಬಾ ರಮಣೀಯ. ಇಲ್ಲಿಯ ಕಟ್ಟಡಗಳು 20ನೇ ಶತಮಾನದ ಮಧ್ಯಭಾಗದ ನಿರ್ಮಾಣಗಳಾಗಿದ್ದು ಅಮೇರಿಕಾದ ಇಂಜಿನಿಯರಿಂಗ್ ಕೌಶಲ್ಯಕ್ಕೆ ನಿಜವಾದ ಸಾಕ್ಷಿಗಳಾಗಿವೆ. "Empire State Buildingî 1929-1931ರಲ್ಲಿ ಕಟ್ಟಲಾಯಿತು. ಇದರಲ್ಲಿ ಸುಮಾರು 103 ಅಂತಸ್ತುಗಳಿದ್ದು 72ನೇ ಅಂತಸ್ತಿನವರೆಗೆ ಲಿಫ್ಟ್ ಇದೆ. ಈ ಕಟ್ಟಡದ ಎತ್ತರ 1454 feet (443.2 ಮೀಟರ್) ಇದ್ದು 1931 ರಿಂದ 1970ರವರೆಗೆ ಜಗತ್ತಿನ ಅತಿ ಎತ್ತರದ ಗಗನಚುಂಬಿ ಕಟ್ಟಡವಾಗಿತ್ತು. ಮುಂದೆ ನಾವು "Philadelphia" ಗೆ ತೆರಳಿ ಅಲ್ಲಿಯೇ ಸುಂದರ ದೃಶ್ಯಗಳನ್ನು ನೋಡುತ್ತಾ ಅಮೇರಿಕಾ ಸ್ವಾತಂತ್ರ್ಯದ ಕುರುಹಾದ "Liberty Bell" ವೀಕ್ಷಿಸಿ, ಊಟ ಮುಗಿಸಿಕೊಂಡು "Hotel comfort"ಗೆ ಬಂದು ಸೇರಿದೆವು.

ಮೂರನೇ ದಿನ ಬೆಳಗ್ಗೆ ಉಪಾಹಾರದ ಬಳಿಕ ನಾವೆಲ್ಲರೂ "Washington D.C ನೋಡಲು ಹೊರಟೆವು. ಇಲ್ಲಿ ಹಲವಾರು ಮ್ಯೂಸಿಯಂಗಳಿವೆ. ನಾವು ಸುಪ್ರಸಿದ್ಧ "Smithsonian Air and Space Musuem" ನ್ನು ವೀಕ್ಷಿಸಿದೆವು. ಇಲ್ಲಿ ಬಾಹ್ಯಾಕಾಶದ, ಚಂದ್ರಲೋಕ ಹಾಗೂ ಇತರ ಗ್ರಹಗಳಿಗೆ ಸಂಬಂಧಪಟ್ಟ ತುಂಬಾ ವಿವರಗಳಿದ್ದವು. ಅಲ್ಲದೆ ಅಮೇರಿಕಾದ NASA ಸಂಸ್ಥೆಯ ಕಾರ್ಯ ಚಟುವಟಿಕೆಗಳ ಬಗ್ಗೆಯೂ ತುಂಬಾ ಮಾಹಿತಿ ಇತ್ತು. ಬಳಿಕ ನಾವು ಅಮೇರಿಕದ ಸಂಸತ್ ಭವನ, ಶ್ವೇತಭವನವನ್ನು (White House) ವೀಕ್ಷಿಸಿದೆವು. ಈ ಕಟ್ಟಡವು ತುಂಬಾ ಎತ್ತರವಾಗಿದ್ದು ವಿಶಾಲವಾದ ವೇದಿಕೆಯ ಮೇಲೆ ಕಟ್ಟಲ್ಪಟ್ಟಿದೆ. ಅಚ್ಚ ಬಿಳಿ ಬಣ್ಣದ ಗೋಲಾಕೃತಿಯ ಈ ಕಟ್ಟಡವು ನೋಡಲು ತುಂಬಾ ಸುಂದರವಾಗಿದೆ. ಇಲ್ಲಿಂದ ಸ್ವಲ್ಪ ಮುಂದೆ ಅಮೇರಿಕದ ಅಧ್ಯಕ್ಷರ ನಿವಾಸವು ಇದೆ. ಈ ಕಟ್ಟಡವು ಹಲವಾರು ಬೃಹತ್ ಕಂಬಗಳನ್ನೊಳಗೊಂಡು ಬಿಳಿ ಬಣ್ಣದಿಂದ ಕಂಗೊಳಿಸುತ್ತಿದೆ. ಪಾರ್ಲಿಮೆಂಟ್ ಪ್ರದೇಶವು ತುಂಬಾ ವಿಶಾಲವಾಗಿದ್ದು ಅಸಂಖ್ಯಾತ ಸರಕಾರಿ ಕಛೇರಿಗಳನ್ನು ಒಳಗೊಂಡಿದೆ. ಬಸ್‌ನಲ್ಲಿ ವಾಷಿಂಗ್‌ಟನ್ ಸುತ್ತಾಡಿ ವಿವಿದ ಕಟ್ಟಡಗಳ ಫೋಟೋಗಳನ್ನು ತಗೆದುಕೊಂಡೆವು.

ವಾಷಿಂಗ್‌ಟನ್ ಬಳಿಯ "Hershey" ಪಟ್ಟಣದಲ್ಲಿ "Hershey Chocolate Word" ಎಂಬ ದೊಡ್ಡ ಚಾಕಲೇಟ್ ಫ್ಯಾಕ್ಟರಿ ಇದೆ. ಇಲ್ಲಿಗೆ ಆಫ್ರಿಕದಿಂದ ದೊಡ್ಡ ಪ್ರಮಾಣದಲ್ಲಿ 'ಕೋಕೋ' ತರಿಸಿ ವಿವಿಧ ರೀತಿಯ ಚಾಕಲೇಟ್‌ಗಳನ್ನು ತಯಾರಿಸುತ್ತಾರೆ. ಚಾಕಲೇಟ್ ತಯಾರಿಕೆಗೆ ಎಲ್ಲಾ ಹಂತಗಳಲ್ಲಿಯೂ ಸ್ವಯಂಚಾಲಿತ ಯಂತ್ರಗಳಿದ್ದು ಎಲ್ಲಿಯೂ ಮಾನವ ಕೈಗಳ ಬಳಕೆ ಇಲ್ಲ. ಶುಚಿತ್ವಕ್ಕೆ ತುಂಬಾ ಮಹತ್ವ ಕೊಡುತ್ತಾರೆ. ಚಾಕಲೇಟ್ ತಯಾರಿಕೆಯ ಪ್ರಾತ್ಯಕ್ಷಿಕೆಯೂ ನೋಡಲು ಸಿಗುತ್ತದೆ. ಇಲ್ಲಿ ನಮ್ಮ ಗುಂಪಿನವರು ಚೀಲಗಟ್ಟಲೆ ಚಾಕಲೇಟ್‌ಗಳನ್ನು ಬಂಧುಬಳಗ, ಗೆಳೆಯರಿಗೆ ಕೊಡಲಿಕ್ಕೆಂದು ಖರೀದಿಸಿದರು. ಬಳಿಕ ನಾವು 'Corning ಎಂಬ ಪಟ್ಟಣದಲ್ಲಿರುವ 'Corning Glass Museumí ನೋಡಿದೆವು. ಈ ಗ್ಲಾಸ್ ಮ್ಯೂಸಿಯಂನ ವಿವಿಧ ಮಳಿಗೆಗಳಲ್ಲಿ ಆಧುನಿಕ ಹಾಗೂ ಆತ್ಯಾಕರ್ಷಕ ಗಾಜಿನ gift ಐಟಂಗಳೂ, ಸುಂದರ ಕಲಾಕೃತಿಗಳೂ ಇದ್ದವು. ಈ ಗ್ಲಾಸ್ ಮ್ಯೂಸಿಯಂನಲ್ಲಿ 3500 ವರ್ಷಗಳಿಗಿಂತಲೂ ಹಳೆಯದಾದ ಹಾಗೂ 40,000 ಕ್ಕಿಂತಲೂ ಅಧಿಕ ಸುಮಧುರ ಗಾಜಿನ ಕಲಾಕೃತಿಗಳಿದ್ದವು.

ಮುಂದಿನ ನಮ್ಮ ಪಯಣ ವಿಶ್ವಪ್ರಸಿದ್ಧ "ನಯಾಗರ ಫಾಲ್ಸ್"ಗೆ. ದಾರಿಯುದ್ದಕ್ಕೂ ಕಾಣಿಸುವ ಸುಂದರ ದೃಶ್ಯಗಳನ್ನು ನೋಡುತ್ತಾ ನಯಾಗರ ತಲುಪಿದೆವು. ರಾತ್ರಿ ಊಟದ ಬಳಿಕ ನಾವು ನಯಾಗರ ಫಾಲ್ಸ್‌ನ್ನು ರಾತ್ರಿಯ ಬೆಳಕಿನಲ್ಲಿ ನೋಡಿ ಆನಂದಿಸಿದೆವು. ಜಲಪಾತದ ನೀರಿನ ಸೆಲೆಯ ಮೇಲೆ ಓಕುಳಿಯಾಡುವ ಕೆನಡಾ ಬದಿಯಿಂದ ಬರುತ್ತಿರುವ ಬಣ್ಣಬಣ್ಣದ ಲೇಸರ್ ಕಿರಣಗಳ ಬೆಳಕಿನಲ್ಲಿ ಕಾಣುವ ಜಲಪಾತದ ಸೌಂದರ್ಯವನ್ನು ನೋಡಿಯೇ ಆನಂದಿಸಬೇಕು. ರಾತ್ರಿಯ ಬೆಳಕಿನಲ್ಲಿ ನೋಡಿದ ಜಲಪಾತದ ವರ್ಣನೆಯನ್ನು ಮಾಡಲು ಶಬ್ದಗಳೇ ಸಿಗುತ್ತಿಲ್ಲಾ.

ಮರುದಿನ ಬೆಳಗ್ಗೆ ಉಪಾಹಾರ ಮುಗಿಸಿ ನಯಾಗರ ಜಲಪಾತವನ್ನು ನೋಡಲು ಹೋದೆವು. ಈ ಜಲಪಾತವು ಅಮೇರಿಕ ಹಾಗೂ ಕೆನಡಾ ದೇಶಗಳ ಮಧ್ಯೆ ಇದ್ದು ಜಲಪಾತದ ಇನ್ನೊಂದು ಬದಿಯಲ್ಲಿ ಕೆನಡಾ ಕಾಣುತ್ತದೆ. ಇಲ್ಲಿ "The Horse shoe", 'The Bridal Veil' ಹಾಗೂ 'American' ಎಂಬ ಹೆಸರಿನ 3 ಜಲಪಾತಗಳಿವೆ. ಇವುಗಳಲ್ಲಿ ಅತೀ ದೊಡ್ಡದಾದ ಜಲಪಾತ Horse Shoe Falls. ಕುದುರೆಲಾಳದ ಆಕಾರದ ಈ ಜಲಪಾತದ ಕೆಳಗೆ ಹೋಗಿ ರೈನ್‌ಕೋಟ್ ಧರಿಸಿ ಬೋಟಿನಲ್ಲಿ ಹತ್ತಿರದಿಂದ ಜಲಪಾತವನ್ನು ವೀಕ್ಷಿಸುವ ಅವಕಾಶ ಇದೆ. ಈ ಜಲಪಾತದ ಕೆಳತಳವು 18 ಮಹಡಿಗಳಷ್ಟು ಆಳದಲ್ಲಿದ್ದು ಸೆಕೆಂಡಿಗೆ 6 ಲಕ್ಷ ಗ್ಯಾಲನ್ ನೀರನ್ನು ಹರಿಸುತ್ತದೆ. ಈ ಅಗಾಧ ಪ್ರಮಾಣದ ನೀರಿನ ಬೀಳುವಿಕೆಯಿಂದಾಗಿ ಜಲಪಾತದ ಕೆಳಗೆ ಹೋದಾಗ ಎಲ್ಲಾ ಕಡೆ ಮಂಜು ತುಂಬಿದಂತೆ ಕಂಡುಬರುತ್ತದೆ. ಜಲಪಾತದ ಮೇಲಿನಿಂದ ಎತ್ತರದಲ್ಲಿ ಸೇತುವೆ ಇದ್ದು ಇದು ಅಮೇರಿಕ ಮತ್ತು ಕೆನಡವನ್ನು ಸಂಪರ್ಕಿಸುತ್ತದೆ. ಆದರೆ ಕೆನಡ ಕಣ್ಣಳತೆಯ ದೂರದಲ್ಲಿದ್ದರೂ ಅಲ್ಲಿಗೆ ಹೋಗಲು ಪ್ರತ್ಯೇಕ 'ವೀಸಾ' ಬೇಕಾಗುತ್ತದೆ. ಈ ಜಲಪಾತವು ಎರಡೂ ರಾಷ್ಟ್ರಗಳಿಗೆ ಪ್ರವಾಸೋದ್ಯಮದಿಂದ ಸಾಕಷ್ಟು ಆದಾಯವನ್ನು ಕೊಡುತ್ತದೆ. ಕೆನಡಾದ ಕಡೆಯಿಂದಲೂ ಪ್ರವಾಸಿಗರು ಬೋಟಿನಲ್ಲಿ ಬಂದು ಜಲಪಾತ ವೀಕ್ಷಿಸುತ್ತಾರೆ.

ಇನ್ನು ನಮ್ಮ ಮುಂದಿನ ಪ್ರವಾಸ ಪಶ್ಚಿಮ ಅಮೇರಿಕಕ್ಕೆ......

(ಮುಂದುವರಿಯುವುದು)

# ಸ್ಥಾನಿಕ ಬ್ರಾಹ್ಮಣ ಮಹಾಮಂಡಲ (ರಿ.), ಮಂಗಳೂರು ಮತ್ತು ಋಕ್ ಸಂಹಿತಾ ಯಾಗ ಸಮಿತಿ, ಪಡುಬಿದ್ರಿ.

## ಆಮಂತ್ರಣ

ಮಾನ್ಯರೇ,

ದಿನಾಂಕ 03-09-2014

ಸಮಸ್ತ ಸಮಾಜ ಬಾಂಧವರ ಶ್ರೇಯೋಭಿವೃದ್ಧಿಯ ಸಂಕಲ್ಪದಲ್ಲಿ ಶ್ರೀ ಬಾಲಗಣಪತಿ ಪ್ರಸನ್ನ ಪಾರ್ವತಿ ದೇವಸ್ಥಾನ ಉದಯಾದ್ರಿ ಮಠ ಪಡುಬಿದ್ರಿಯಲ್ಲಿ ಕಾರ್ತಿಕ ಶುದ್ಧ ತೃತೀಯ ದಿನಾಂಕ 26-10-2014 ಆದಿತ್ಯವಾರದಿಂದ ದಿನಾಂಕ 02-11-2014 ಆದಿತ್ಯವಾರ ದಶಮಿ ಪರ್ಯಂತ

ಬ್ರಹ್ಮಶ್ರೀ ಪಾವಂಜೆ ವಾಗೀಶ ಶಾಸ್ತ್ರಿಯವರ ನೇತೃತ್ವದಲ್ಲಿ

## ಋಕ್ ಸಂಹಿತಾ ಮಹಾಯಾಗ

ಮತ್ತು ದಿನಾಂಕ 26-10-2014ರಂದು

ಶ್ರೀ ಕೋದಂಡಾಶ್ರಮ ಹೆಬ್ಬೂರಿನ ಪರಮಪೂಜ್ಯ ಶ್ರೀ ಶ್ರೀ ಮಾಧವಾಶ್ರಮ ಸ್ವಾಮಿಗಳವರ ದಿವ್ಯ ಉಪಸ್ಥಿತಿಯಲ್ಲಿ

## ವೈದಿಕ ಸಮಾವೇಶ

ಹಾಗೂ 02-11-2014ರಂದು

ಶ್ರೀ ಶ್ರೀ ಜಗದ್ಗುರು ಶಂಕರಾಚಾರ್ಯ ತೋಟಕಾಚಾರ್ಯ ಮಹಾಸಂಸ್ಥಾನಂ ಎಡನೀರು ಮಠ ಶ್ರೀ ಶ್ರೀ ಕೇಶವಾನಂದ ಭಾರತೀ ಸ್ವಾಮಿಗಳವರ ದಿವ್ಯ ಉಪಸ್ಥಿತಿಯಲ್ಲಿ **ಋಕ್ ಸಂಹಿತಾ ಮಹಾಯಾಗ ಪೂರ್ಣಾಹುತಿ** ನೆರವೇರಲಿದೆ.

ತದಂಗ ಶ್ರೀ ಮಹಾಗಣಪತಿ ಹೋಮ, ಪಂಚಾಯತನ ದೇವತೆಗಳ ಸಂಬಂಧಿ ಹೋಮ, ಬ್ರಾಹ್ಮಣ ಸುವಾಸಿನಿ ಆರಾಧನೆ, ಶ್ರೀ ಶಂಕರಾಚಾರ್ಯ ಅಷ್ಟೋತ್ತರ ಶತನಾಮಾವಳಿ, ಲಲಿತಾ/ವಿಷ್ಣು ಸಹಸ್ರಾನಾಮ ಪಾರಾಯಣ, ಭಜನೆ ಅಷ್ಟಾವಧಾನಸೇವೆ, ಮಹಾಪೂಜೆ ಧಾರ್ಮಿಕ-ಸಾಂಸ್ಕೃತಿಕ ಕಾರ್ಯಕ್ರಮಗಳೊಂದಿಗೆ ನಿತ್ಯ ಅನ್ನಸಂತರ್ಪಣೆ ಜರಗಲಿದೆ. ಈ ಎಲ್ಲಾ ಕಾರ್ಯಕ್ರಮಗಳಲ್ಲಿ ಸಮಾಜ ಬಾಂಧವರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ತನುಮನಧನ ಸಹಕಾರವನ್ನು ನೀಡಬೇಕಾಗಿ ವಿನಂತಿ.ಅದೇ ದಿನ **ಸ್ಥಾನಿಕ ಬ್ರಾಹ್ಮಣ ಸಮಾವೇಶ**ವೂ ಜರಗಲಿದೆ.

ಸರ್ವರಿಗೂ ಆದರದ ಸ್ವಾಗತ ಬಯಸುವ :

**ಸ್ಥಾನಿಕ ಬ್ರಾಹ್ಮಣ ಮಹಾಮಂಡಲ (ರಿ.) ಮಂಗಳೂರು ಇದರ ಸರ್ವಸದಸ್ಯರು ಹಾಗೂ ಋಕ್ ಸಂಹಿತಾ ಯಾಗ ಸಮಿತಿಯ ಅಧ್ಯಕ್ಷರು ಮತ್ತು ಸರ್ವಸದಸ್ಯರು**

## ಕಾರ್ಯಕ್ರಮ ವಿವರ

**ದಿನಾಂಕ :26-10-2014 ಆದಿತ್ಯವಾರ**

| | |
|---|---|
| ಸಮಯ 6.00 | : ಸಾಮೂಹಿಕ ಪ್ರಾರ್ಥನೆ |
| 8.00ರಿಂದ 10.30 | : ಋಕ್ ಸಂಹಿತಾ ಯಾಗ ಆರಂಭ, ನವಗ್ರಹ ಹೋಮ ಮತ್ತು ಗಣಹೋಮ ವೇ.ಬ್ರ.ಶ್ರೀ ವಾಗೀಶ ಶಾಸ್ತ್ರಿಗಳ ನೇತೃತ್ವ |
| 10.30ರಿಂದ 12.00 | : ವೈದಿಕ ಸಮಾವೇಶ ಉದ್ಘಾಟನೆ ಪರಮಪೂಜ್ಯ ಶ್ರೀ ಶ್ರೀ ಮಾಧವಾಶ್ರಮ ಸ್ವಾಮಿಗಳ ಉಪಸ್ಥಿತಿ |
| ಮಧ್ಯಾಹ್ನ 1.00ರಿಂದ | : ಬ್ರಾಹ್ಮಣ ಸುವಾಸಿನಿ ಆರಾಧನೆ, ಅನ್ನ ಸಂತರ್ಪಣೆ, |
| 2.00ರಿಂದ 4.30 | : ವೈದಿಕ ಸಮಾವೇಶ |
| 5.00ರಿಂದ 5.45 | : ಲಲಿತಾ/ವಿಷ್ಣು ಸಹಸ್ರ ಪಾರಾಯಣ, ಭಜನೆ ವಿವಿಧ ಸಂಘ ಸಂಸ್ಥೆಗಳಿಂದ |
| 6.00ರಿಂದ 7.00 | : ಧಾರ್ಮಿಕ ಉಪನ್ಯಾಸ ಹೆಬ್ಬೂರು ಶ್ರೀ ಶ್ರೀ ಗಳವರಿಂದ |
| 7.00ರಿಂದ 9.00 | : ಸಾಂಸ್ಕೃತಿಕ ಕಾರ್ಯಕ್ರಮ : ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ) ಉಡುಪಿ ಇವರಿಂದ |

**ದಿನಾಂಕ : 27-10-2014 ಸೋಮವಾರ**

| | |
|---|---|
| 8.00ರಿಂದ 12.00 | : ದುರ್ಗಾ ಹೋಮ : ಶ್ರೀ ಸೂರ್ಯನಾರಾಯಣ ಭಟ್ ಪುತ್ತೂರು ಇವರ ನೇತೃತ್ವ |
| 12.00ರಿಂದ 1.00 | : ಬ್ರಾಹ್ಮಣ ಸುವಾಸಿನಿ ಆರಾಧನೆ, ಅನ್ನ ಸಂತರ್ಪಣೆ |
| 5.00ರಿಂದ 5.45 | : ಲಲಿತಾ/ವಿಷ್ಣು ಸಹಸ್ರ ನಾಮ, ಶಂಕರಾಚಾರ್ಯ ಅಷ್ಟೋತ್ತರ ಪಾರಾಯಣ, ಭಜನೆ |
| 6.00ರಿಂದ 7.00 | : ಧಾರ್ಮಿಕ ಉಪನ್ಯಾಸ-ಹಿರಣ್ಯ ವೆಂಕಟೇಶ ಭಟ್ ಇವರಿಂದ |
| 7.00ರಿಂದ 9.00 | : ಸಾಂಸ್ಕೃತಿಕ ಕಾರ್ಯಕ್ರಮ: ಶ್ರೀ ಸುಬ್ರಹ್ಮಣ್ಯ ಸ್ಥಾನಿಕ ಬ್ರಾಹ್ಮಣ ಸಂಘ ಬೆಳ್ತಂಗಡಿ ಇವರಿಂದ |

**ದಿನಾಂಕ : 28-10-2014 ಮಂಗಳವಾರ**

| | |
|---|---|
| 8.00ರಿಂದ 12.00 | : ಸ್ವಯಂವರ ಪಾರ್ವತಿ ಹೋಮ ಶ್ರೀ ದೇವರಾಜ್ ಹೆಬ್ಬಾರ್ ಪಾವಂಜೆ ನೇತೃತ್ವದಲ್ಲಿ |
| 12.00ರಿಂದ 1.00 | : ಬ್ರಾಹ್ಮಣ ಅನ್ನಸಂತರ್ಪಣೆ |
| 5.00ರಿಂದ 5.45 | : ಲಲಿತಾ/ವಿಷ್ಣು ಸಹಸ್ರ ನಾಮ ಪಾರಾಯಣ |
| 6.00ರಿಂದ 7.00 | : ಧಾರ್ಮಿಕ ಉಪನ್ಯಾಸ : ಶ್ರೀ ಪದ್ಮನಾಭ ಮರಾಠೆ, ಪ್ರಾಂಶುಪಾಲರು, ಸಂಸ್ಕೃತ ಕಾಲೇಜು, ಕಟೀಲು ಅವರಿಂದ |
| 7.00ರಿಂದ 9.00 | : ಸಾಂಸ್ಕೃತಿಕ ಕಾರ್ಯಕ್ರಮ: ಕುಂದಾಪುರ ತಾಲೂಕು ಸ್ಥಾನಿಕ ಬ್ರಾಹ್ಮಣ ಸಂಘ ಇವರಿಂದ |

**ದಿನಾಂಕ: 29-10-2014 ಬುಧವಾರ**

| | |
|---|---|
| 8.00ರಿಂದ 12.00 | : ರುದ್ರಾ ಹೋಮ : ಶ್ರೀ ಗುರುಪ್ರಸಾದ ಹೆಬ್ಬಾರ್ ಇವರ ನೇತೃತ್ವ |
| 12.00 ರಿಂದ 1.00 | : ಅನ್ನ ಸಂತರ್ಪನೆ, |
| 5.00ರಿಂದ 6.00 | : ಭಜನೆ, ಲಲಿತಾ/ವಿಷ್ಣು ಸಹಸ್ರ ನಾಮ ಪಾರಾಯಣ |
| 6.00ರಿಂದ 7.00 | : ಧಾರ್ಮಿಕ ಉಪನ್ಯಾಸ: ವೇ.ಬ್ರ.ಶ್ರೀಪಂಜ ಭಾಸ್ಕರ ಭಟ್ ಇವರಿಂದ |
| 7.00ರಿಂದ 9.00 | : ಸಾಂಸ್ಕೃತಿಕ ಕಾರ್ಯಕ್ರಮ : ಸ್ಥಾನಿಕ ಬ್ರಾಹ್ಮಣ ಸಂಘ, ಸುರತ್ಕಲ್ ಸಂಘ ಇವರಿಂದ |

**ದಿನಾಂಕ : 30-10-2014 ಗುರುವಾರ**

| | |
|---|---|
| 8.00ರಿಂದ 12.00 | : ಶತಮೋದಕ ಹೋಮ: ವೇ.ಬ್ರ.ಶ್ರೀ ಪಾವಂಜೆ ವಾಸುದೇವ ಉಪಾಧ್ಯಾಯರ ನೇತೃತ್ವದಲ್ಲಿ |
| 12.00ರಿಂದ 1.00 | : ಬ್ರಾಹ್ಮಣ ಸುವಾಸಿನಿ ಆರಾಧನೆ, ಅನ್ನ ಸಂತರ್ಪಣೆ, |
| 5.00ರಿಂದ 6.00 | : ಭಜನೆ,ಲಲಿತಾ/ವಿಷ್ಣು ಸಹಸ್ರ ನಾಮ ಪಾರಾಯಣ |
| 6.00ರಿಂದ 7.00 | : ಧಾರ್ಮಿಕ ಉಪನ್ಯಾಸ : ಡಾ। ಎಂ.ಪ್ರಭಾಕರ ಜೋಷಿ ಇವರಿಂದ |
| 7.00ರಿಂದ 9.00 | : ಸಾಂಸ್ಕೃತಿಕ ಕಾರ್ಯಕ್ರಮ : ಶಂಕರ ಪ್ರತಿಷ್ಠಾನ ಕಾರ್ಕಳ ಮತ್ತು ಆದಿಶಂಕರ ಬ್ರಾಹ್ಮಣ ಪರಿಷತ್ತು ಮೂಡುಬಿದ್ರಿ |

**ದಿನಾಂಕ : 31-10-2014 ಶುಕ್ರವಾರ**

| | |
|---|---|
| 8.00 ರಿಂದ 12.00 | : ಹೇರಂಭ ಗಣಪತಿ ಹೋಮ : ಶ್ರೀ ಶಿವಪ್ರಸಾದ್ ಭಟ್ ಇವರ ನೇತೃತ್ವ |
| 12.00ರಿಂದ 1.00 | : ಬ್ರಾಹ್ಮಣ ಸುವಾಸಿನಿ ಆರಾಧನೆ, ಅನ್ನ ಸಂತರ್ಪಣೆ, |
| 5.00ರಿಂದ 6.00 | : ಭಜನೆ, ಲಲಿತಾ/ಸಹಸ್ರ ನಾಮ, ವಿಷ್ಣು ಸಹಸ್ರ ನಾಮ |
| 6.00ರಿಂದ 7.00 | : ಧಾರ್ಮಿಕ ಉಪನ್ಯಾಸ : ಶ್ರೀ ಎಂ.ಆರ್. ವಾಸುದೇವ ಇವರಿಂದ |
| 7.00 ರಿಂದ 9.00 | : ಸಾಂಸ್ಕೃತಿಕ ಕಾರ್ಯಕ್ರಮ : ಸ್ಥಾನಿಕ ಬ್ರಾಹ್ಮಣ ಸಂಘ ಪಡುಬಿದ್ರಿ ಇವರಿಂದ |

**ದಿನಾಂಕ : 01-11-2014 ಶನಿವಾರ**

| | |
|---|---|
| 8.00ರಿಂದ 12.00 | : ಸುಬ್ರಹ್ಮಣ ಹೋಮ : ಯಾಜಿ ಶ್ರೀ ದಿವಾಕರ ಭಟ್ ಇವರ ನೇತೃತ್ವ ಮೃತ್ಯುಂಜಯ ಹೋಮ : ವೇ.ಬ್ರ. ಶ್ರೀ ಪ್ರಶಾಂತ ಭಟ್ ಇವರ ನೇತೃತ್ವ |
| 12.00ರಿಂದ 1.00 | : ಬ್ರಾಹ್ಮಣ ಸುವಾಸಿನಿ ಆರಾಧನೆ, ಅನ್ನ ಸಂತರ್ಪಣೆ |
| 5.00ರಿಂದ 6.00 | : ಭಜನೆ, ಲಲಿತಾ/ವಿಷ್ಣುಸಹಸ್ರ ನಾಮಪಾರಾಯಣ |
| 6.00ರಿಂದ 7.00 | : ಧಾರ್ಮಿಕ ಉಪನ್ಯಾಸ : ಶ್ರೀ ಕೆ.ಎಲ್. ಕುಂಡಂತಾಯ ಇವರಿಂದ |
| 7.00ರಿಂದ 9.00 | : ಸಾಂಸ್ಕೃತಿಕ ಕಾರ್ಯಕ್ರಮ : ಶಿವ ಬ್ರಾಹ್ಮಣ ಸಮಾಜ ಸೇವಾ ಸಂಸ್ಥೆ ಪುತ್ತೂರು ಸುಬ್ರಹ್ಮಣ್ಯ ಸ್ಥಾನಿಕ ಸಮಾಜ ಸೇವಾ ಸಂಘ (ರಿ) ಸುಳ್ಯ, ಮಿತ್ರ ಸಮಾಜ ಪುತ್ತೂರು. |

**ದಿನಾಂಕ : 02-11-2014 ರವಿವಾರ**

| | |
|---|---|
| 8.00ರಿಂದ 12.00 | : ಋಕ್ ಸಂಹಿತಾ ಯಾಗ ಪೂರ್ಣಾಹುತಿ ವೇ.ಬ್ರ.ಶ್ರೀ ವಾಗೀಶ ಶಾಸ್ತ್ರಿಗಳ ನೇತೃತ್ವ ದಿವ್ಯ ಉಪಸ್ಥಿತಿ: ಪರಮಪೂಜ್ಯ ಶ್ರೀ ಶ್ರೀ ಕೇಶವಾನಂದ ಸ್ವಾಮಿಜಿ |
| 12.00ರಿಂದ 1.00 | : ಅನ್ನಸಂತರ್ಪಣೆ |
| 2.00ರಿಂದ | : ಸ್ಥಾನಿಕ ಬ್ರಾಹ್ಮಣ ಸಮಾವೇಶ |
| 4.00ರಿಂದ | : ಸಾಂಸ್ಕೃತಿಕ ಕಾರ್ಯಕ್ರಮ : ಶ್ರೀ ಸುಬ್ರಹ್ಮಣ್ಯ ಸಭಾ ಮಂಗಳೂರು ಇವರಿಂದ |

**ಪ್ರಾಯೋಜಿಸಬಹುದಾದ ಕಾರ್ಯಕ್ರಮಗಳು :**

| | | |
|---|---|---|
| 1. | ಋಕ್ ಸಂಹಿತಾ ಯಾಗದ ಒಂದು ಅಧ್ಯಾಯ ಹೋಮ | ರೂ.5,000/- |
| 2. | ಶ್ರೀ ನವಗ್ರಹ ಹೋಮ | ರೂ.5,000/- |
| 3. | ಶ್ರೀ ಮಹಾಗಣಪತಿ ಹೋಮ | ರೂ.5,000/- |
| 4. | ಶ್ರೀ ದುರ್ಗಾ ಹೋಮ | ರೂ.5,000/- |
| 5. | ಶ್ರೀ ಸ್ವಯಂವರ ಪಾರ್ವತಿ ಹೋಮ | ರೂ.5,000/- |
| 6. | ಶ್ರೀ ರುದ್ರ ಹೋಮ | ರೂ.5,000/- |
| 7. | ಶ್ರೀ ಶತಮೋದಕ ಹೋಮ | ರೂ.5,000/- |
| 8. | ಶ್ರೀ ಹೇರಂಬ ಗಣಪತಿ ಹೋಮ | ರೂ.5,000/- |
| 9. | ಶ್ರೀ ಸುಬ್ರಹ್ಮಣ್ಯ ಹೋಮ | ರೂ.5,000/- |
| 10. | ಶ್ರೀ ಮೃತ್ಯುಂಜಯ ಹೋಮ | ರೂ.5,000/- |
| 11. | ಬ್ರಾಹ್ಮಣ ಸುಹಾಸಿನಿ ಆರಾಧನೆ 1 ದಿನ | ರೂ.10,000/- |
| 12. | ಬ್ರಾಹ್ಮಣ ಸುಹಾಸಿನಿ ಆರಾಧನೆ 1 ಹೊತ್ತು | ರೂ.500/- |

**(ತಾ.26-10-2014ರಿಂದ 02-11-2014ರವರೆಗೆ ನಿರಂತರವಾಗಿ ಋಕ್ ಸಂಹಿತಾ ಯಾಗ ನಡೆಯುತ್ತಿರುತ್ತದೆ.)**

## ಶ್ರೀಶಾರದಾ ಕ್ರೆಡಿಟ್ ಕೋ-ಆಪರೇಟಿವ್ ಸೊಸ್ಯಾಟಿ (ನಿ.)

ಎಲ್.ನಂ.31017, ಭೂವರಾಹ ಸಂಕೀರ್ಣ, ವಾದಿರಾಜ ರಸ್ತೆ, ಉಡುಪಿ - 576 101.

ಇದರ

### ಕೋಟೇಶ್ವರ ಶಾಖೆಯ ಉದ್ಘಾಟನಾ ಸಮಾರಂಭದ

ಆತ್ಮೀಯ ಕರೆಯೋಲೆ

**ದಿನಾಂಕ : 09-11-2014 ರವಿವಾರ ಸಮಯ : ಪೂರ್ವಾಹ್ನ ಗಂಟೆ 11-00ಕ್ಕೆ**
**ಸ್ಥಳ : ಪ್ರಥಮ ಮಹಡಿ, ಶ್ರೀರಾಮ ಸಂಕೀರ್ಣ, ಕೋಟೇಶ್ವರ**

ಉದ್ಘಾಟನೆ : **ಶ್ರೀ ಸೂರ್ಯನಾರಾಯಣ ಉಪಾಧ್ಯಾಯ**
ಧರ್ಮದರ್ಶಿಗಳು, ಶ್ರೀ ಕ್ಷೇತ್ರ ಆನೆಗುಡ್ಡೆ, ಕುಂಭಾಶಿ.

ಅಧ್ಯಕ್ಷತೆ : **ಶ್ರೀ ಉಮೇಶ್ ಶ್ಯಾನುಭೋಗ್**
ಧರ್ಮದರ್ಶಿಗಳು, ಶ್ರೀ ಅಗಸ್ತ್ಯೇಶ್ವರ ದೇವಸ್ಥಾನ, ಕಿರಿಮಂಜೇಶ್ವರ.

ಮುಖ್ಯ ಅತಿಥಿಗಳು : **ಶ್ರೀಮತಿ ಚಂದ್ರಪ್ರತಿಮ ಎಂ.ಜೆ.,**
ಸಹಕಾರ ಸಂಘಗಳ ಉಪನಿಬಂಧಕರು
ಹಾಗೂ ಸಹಾಯಕ ನಿಬಂಧಕರು, ಉಡುಪಿ ಜಿಲ್ಲೆ.

**ಶ್ರೀ ದಯಾನಂದ ರಾವ್,** ಮುಖ್ಯಕಾರ್ಯನಿರ್ವಹಣಾಧಿಕಾರಿ,
ಹಾಲು ಉತ್ಪಾದಕರ ಸಂಘ, ಶಂಕರನಾರಾಯಣ.

**ಶ್ರೀ ಶ್ರೀನಿವಾಸ ಹೆಬ್ಬಾರ್,**
ಗೌರವಾಧ್ಯಕ್ಷರು, ಕುಂದಾಪುರ ತಾಲೂಕು ದ್ರಾವಿಡ ಬ್ರಾಹ್ಮಣ ಪರಿಷತ್.

**ಶ್ರೀ ಗೋಪಾಲಕೃಷ್ಣ ಹೆಬ್ಬಾರ್,**
ಅಧ್ಯಕ್ಷರು, ಕುಂದಾಪುರ ತಾಲೂಕು ಸ್ಥಾನಿಕ ಬ್ರಾಹ್ಮಣ ಸಂಘ.

**ಶ್ರೀ ರಾಜಶೇಖರ ಶೆಟ್ಟಿ**
ಅಧ್ಯಕ್ಷರು, ಗ್ರಾಮ ಪಂಚಾಯತ್, ಕೋಟೇಶ್ವರ.

**ಶ್ರೀ ರವೀಂದ್ರ ದೊಡ್ಮನೆ,** ಸದಸ್ಯರು, ಬೀಜಾಡಿ ಗ್ರಾಮ ಪಂಚಾಯತ್.

**ಶ್ರೀ ಸಚಿನ್ ನಕತ್ತಾಯ,** ಉದ್ಯಮಿ, ಓಂ ಟೈಲ್ಸ್, ಕುಂದಾಪುರ.

**ಶ್ರೀ ಪ್ರಕಾಶ್ ರಾವ್**
ಉದ್ಯಮಿ, ಪೂರ್ಣಿಮಾ ಕ್ಲೋತ್ ಸ್ಟೋರ್ಸ್, ಬೈಂದೂರು.

**ಶ್ರೀ ಗೋವಿಂದರಾಯ ಸಂಜೀವ ಕಾಮತ್**
ಉದ್ಯಮಿ, ಕಟ್ಟಡ ಮಾಲ್ಹಕರು, ಕೋಟೇಶ್ವರ.

*-: ತಮಗೆಲ್ಲರಿಗೂ ಆದರದ ಸ್ವಾಗತ ಬಯಸುವ :-*

| | | |
|---|---|---|
| **ಯಂ. ಸದಾನಂದ ರಾವ್** | **ಕೆ. ವಿಶ್ವನಾಥ್ ರಾವ್** | **ಪಟ್ಟಾಭಿರಾಮ ಎನ್.ಎಸ್.** |
| ಅಧ್ಯಕ್ಷರು | ಶಾಖಾ ವ್ಯವಸ್ಥಾಪಕರು | ಕಾರ್ಯದರ್ಶಿ |

**ಆಡಳಿತ ಮಂಡಳಿ ಸದಸ್ಯರು, ಸರ್ವಸದಸ್ಯರು, ಸಿಬ್ಬಂದಿ ವರ್ಗ**

ಆಡಳಿತ ಮಂಡಳಿ : ಶ್ರೀ ಯಂ. ಸದಾನಂದ ರಾವ್ (ಅಧ್ಯಕ್ಷರು) ಶ್ರೀ ಕೆ. ವೇಣುಗೋಪಾಲ್ ರಾವ್ (ಉಪಾಧ್ಯಕ್ಷರು) ನಿರ್ದೇಶಕರು : ಶ್ರೀ ಪ್ರಪುಲ್ಲಚಂದ್ರ ರಾವ್, ಶ್ರೀ ಅರವಿಂದ ಕುಮಾರ್, ಶ್ರೀ ಕೆ. ಮಂಜುನಾಥ್ ಹೆಬ್ಬಾರ್, ಶ್ರೀ ವೈ. ಮುರಲೀಕೃಷ್ಣರಾವ್, ಶ್ರೀ ವೈ. ಪ್ರಕಾಶ್ ಕುಮಾರ್, ಶ್ರೀ ಬಿ. ಕೃಷ್ಣಮೂರ್ತಿ ರಾವ್, ಶ್ರೀಮತಿ ಗೀತಾ ಕೃಷ್ಣಕುಮಾರ್

**ಶಾಖೆಗಳು :**

| | |
|---|---|
| ಶ್ರೀಕಲಾ ಸಂಕೀರ್ಣ, ಕುಕ್ಕಿಕಟ್ಟೆ, ಉಡುಪಿ - 576 101. ದೂರವಾಣಿ : 2592133 | ಮೊದಲ ಮಹಡಿ, ಗೋಕುಲ ಸಂಕೀರ್ಣ, ಕಾರ್ಕಳ ರಸ್ತೆ, ಪಡುಬಿದ್ರಿ - 574 111. ದೂರವಾಣಿ : 2556608 |

## SRI SUBRAHMANYA SEVA SANGHA

Regd. Office : B-1/14, Shubh Karma C.H.S.Ltd., Karma Kshetra,
SSS Nagar, Near Shanmukhanand Hall, Koliwada, Mubai-400037.

### PLATINUM JUBILEE CELEBRATIONS

**ON SATURDAY,15-11-2014**
**At SRI VISWESWARAYYA MEMORIAL HALL, MATUNGA(W)**
**(KARNATAKA SANGHA)**

| | |
|---|---|
| 3-15 p.m to 4-45 p.m | : Classical Dance programs by members and their children |
| 4-45 p.m. to 5-00 p.m. | : Tea break (history of association to be displayed) |
| 5-00p.m. to 7-00 p.m. | : Stage Program |
| | : Chief Guest Justice Sri Krishna, |
| | : Inauguration by lighting the lamp. 2. Prayer |
| | : Brief introduction of the Association (social, cultural, spiritual and educational) |
| | : Introduction and Felicitation of the Chief Guest. |
| | : Felicitation of the Tulu/Kannada Associations on Mumbai who have completed 75 years of their establishment and service. |
| | : Short speech by the representatives of the Associations |
| | : Release of Souvenir cum Directory. |
| | : Address by the Chief Guest, Justice Sri Krishna |
| | : Vote of Thanks |
| 7-00p.m. to 8-30 p.m. | : Ballet Dance "Bhakta Pralhada" directed by Guru shailaja Madhusoodan |
| 8-30 p.m. onwards | : Dinner. |

**On SUNDAY, 16-11-2014- GOKUL HALL, SION (EAST)**

| | |
|---|---|
| 9-30 A.M | : Assembly at Gokul and breakfast |
| 10 a.m.to 1 p.m. | : Debate on 1) youth Participation in community activities |
| | : Marriage –Problem being faced and the solutions –Job, career, |
| | : Problems of Purohits, Cooks and temples Moderators-Manohar Prasad, Sabita Rao, Vagesh Shastri, Karunakar Belle |
| 1p.m. to 2 p.m. | : Lunch |
| 2p.m. to 3 p.m. | : Sangeeta by Vidhushi Nandini Rao. |
| 3p.m. to 5 p.m. | : Stage Program Prayer, Introduction of Chief Guest, Felicitation Felicitation of Dignitaries of our community Address by Chief Guest |
| 5 p.m. to 5-15 p.m | : TEA BREAK. |
| 5-15 p.m to to 8-30 p.m | : YAKSHAGANA by our Community members from native and Mumbai both Tenku Tittu as well as Badagu Thittu. |
| 8-30 p.m. onwards | : DINNER. |

*All are cordially invited*

**PRESIDENT & ALL MEMBER**

## ಕಡಬದಲ್ಲಿ ಅನಂತವ್ರತ ಉದ್ಯಾಪನೆ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳು

ಕಡಬದಲ್ಲಿ ದಿನಾಂಕ 8 ಮತ್ತು 9 ಸಪ್ಟೆಂಬರ್ 2014ರಂದು 2 ದಿನಗಳಲ್ಲಿ ಕುಂಭಾಟ್ ಜ್ಞಾನೇಶ್‌ರವರ ಮಧುವನ ಮನೆಯಲ್ಲಿ ವೇದಮೂರ್ತಿ ಬಟ್ರಪಾಡಿ ಸೂರ್ಯನಾರಾಯಣ ಭಟ್ ಇವರ ನೇತೃತ್ವದಲ್ಲಿ ಶ್ರೀ ಅನಂತವ್ರತ (ನೋಂಪು); ಉದ್ಯಾಪನೆ ಇತ್ಯಾದಿ ಪೂಜಾ ಕಾರ್ಯಕ್ರಮಗಳು ಜರಗಿದವು. ಇದೇ ಸಂದರ್ಭದಲ್ಲಿ ಬೆಂಗಳೂರಿನ ಶ್ರೀ ಗುರುಭಗವಾನ್ ಗಂಗಾಧರ ಗುರೂಜಿಯವರಿಂದ ಪರಬ್ರಹ್ಮ ವಿಜ್ಞಾನದ ಪರಿಚಯ ಶಿಬಿರವೊಂದನ್ನು ಅಳವಡಿಸಲಾಗಿತ್ತು.

ಸುಮಾರು 3 ಗಂಟೆಗಳ ಕಾಲ ಪರಬ್ರಹ್ಮ ವಿಜ್ಞಾನದ ಬಗ್ಗೆ ಮಾಹಿತಿ ನೀಡಿದರು. ಅಲ್ಲದೆ ಆಸಕ್ತ ಸುಮಾರು 60 ಮಂದಿ ಶಿಬಿರಾರ್ಥಿಗಳಿಗೆ ಪ್ರಣವೋಪಾಸನಾದೀಕ್ಷೆ ನೀಡಿದರು. ಈ ಎರಡು ದಿನಗಳಲ್ಲಿ ವಿಷ್ಣು ಸಹಸ್ರ ನಾಮ ಪಾರಾಯಣ; ಲಲಿತ ಸಹಸ್ರ ಪಾರಾಯಣ; ರುದ್ರ ಪಾರಾಯಣ ಇತ್ಯಾದಿ ವೈದಿಕ ಕಾರ್ಯಕ್ರಮಗಳು ಜರಗಿದವು. ಕಡಬ ಶ್ರೀ ದುರ್ಗಾಂಬಿಕಾ ಭಜನಾ ಮಂಡಳಿಯವರು ಭಜನಾ ಕಾರ್ಯಕ್ರಮ ನಡೆಸಿದರು. ರಾತ್ರಿ ಸುರತ್ಕಲ್ ಹೊಸಬೆಟ್ಟು ಗುರು ರಾಘವೇಂದ್ರ ಸಂಚಾರಿ ಯಕ್ಷಗಾನ ಸಂಘದವರಿಂದ ಶ್ರೀ ಸುದರ್ಶನ ಚಕ್ರವೆಂಬ ತಾಳಮದ್ದಳೆ ಕಾರ್ಯಕ್ರಮ ಜರಗಿತು.

ಮಧ್ಯಾಹ್ನ ನಡೆದ ಧಾರ್ಮಿಕ ಸಭೆಯಲ್ಲಿ ಸುಮಾರು 30 ಮಂದಿ ವಿದ್ಯಾರ್ಥಿಗಳಿಗೆ, ಅಶಕ್ತರಿಗೆ ಧನಸಹಾಯ ನೀಡಲಾಯಿತು. ಕುಂಭಾಟ್ ಕುಟುಂಬಸ್ತರು, ಸಮಾಜ ಬಾಂಧವರು, ಊರವರು ಪಾಲು ಗೊಂಡಿದ್ದರು.

ಶೃಂಗೇರಿ ಮಠದ ವತಿಯಿಂದ ಧರ್ಮಾಧಿಕಾರಿ ಶ್ರೀ ಸತ್ಯಶಂಕರ ಬೊಳ್ಳಾವರವರು ಆಗಮಿಸಿ ಶುಭ ಹಾರೈಸಿದರು. ಕಡಬ ಗೋಪಾಲರಾವ್ ಸರ್ವರನ್ನೂ ಸ್ವಾಗತಿಸಿದರು. ಬೆಂಗಳೂರಿನಲ್ಲಿರುವ ಕುಂಭಾಟ್ ಸಂತೋಷ್‌ರಾವ್ ಸಭಾ ಕಾರ್ಯಕ್ರಮ ನಿರೂಪಿಸಿದರು.

ವರದಿ: ಶ್ರೀಮತಿ ಪ್ರಮೀಳ ರಾವ್. ಶಿಕ್ಷಕಿ ಬಿಳಿನೆಲೆ.

### ಶುಭ ಜನನ

**ಅಮೇರಿಕಾದ ಕ್ಯಾಲಿಫೋರ್ನಿಯಾದಲ್ಲಿ ವಾಸ್ತವ್ಯದಲ್ಲಿರುವ ಶ್ರೀ ಜ್ಯೋತಿಪ್ರಕಾಶ್ (ಬೆಂಗಳೂರಿನ ದಿ| ಜಯರಾಮ ಹಾಗೂ ಶ್ರೀಮತಿ ವಿಜಯಾ ದಂಪತಿಗಳ ಪುತ್ರ) ಹಾಗೂ ಶ್ರೀಮತಿ ಸ್ಮಿತಾ ದಂಪತಿಗಳಿಗೆ ದಿನಾಂಕ 29-08-2014ರಂದು ಹೆಣ್ಣು ಶಿಶುವಿನ ಜನನ**

## ಸುರತ್ಕಲ್‌ನಲ್ಲಿ ವಾರ್ಷಿಕ ಮಹಾಸಭೆ

ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ) ಸುರತ್ಕಲ್ ಇದರ 2013–14ನೇ ಸಾಲಿನ ವಾರ್ಷಿಕ ಮಹಾಸಭೆಯು ದಿನಾಂಕ 19–10–2014ರ ರವಿವಾರ ಬೆಳಿಗ್ಗೆ 10.30ಕ್ಕೆ ಸುರತ್ಕಲ್‌ನ ನಲಂದಾ ಕಾಂಪ್ಲೆಕ್ಸ್‌ನ ಹಿಂದುಗಡೆ ಇರುವ ವಿವೇಕಾನಂದ ಸಭಾಗೃಹದ "ಮಾನಸ" ದಲ್ಲಿ ನೆರವೇರಲಿದೆ. ಸಂಘದ ಸದಸ್ಯರೆಲ್ಲರೂ ಈ ಸಭೆಯಲ್ಲಿ ಪಾಲ್ಗೊಳ್ಳುವಂತೆ ಸಂಘದ ಪ್ರಕಟಣೆಯು ತಿಳಿಸಿದೆ.

## ಕಾಸರಗೋಡಿನಲ್ಲಿ ಜಿಲ್ಲಾ ಸಮಾವೇಶ

ಕಾಸರಗೋಡಿನ ಶಿವ ಬ್ರಾಹ್ಮಣ ಸಭಾ (ರಿ) ಇದರ 19ನೇ ವಾರ್ಷಿಕ ಮಹಾಸಭೆ ಮತ್ತು ಜಿಲ್ಲಾ ಸಮಾವೇಶವು ದಿನಾಂಕ 19–10–2014ರಂದು ರವಿವಾರ ಕುತ್ಯಾಳ ಶ್ರೀ ಗೋಪಾಲಕೃಷ್ಣೆ ದೇವಸ್ಥಾನ, ಕೂಡ್ಲು ಇಲ್ಲಿ ನೆರವೇರಲಿದೆ. ಬೆಳಿಗ್ಗೆ 10 ಗಂಟೆಗೆ ಸಂಘದ ಅಧ್ಯಕ್ಷರಾದ ಡಾ। ಎಂ ಸತ್ಯನಾಥ್‌ರ ಅಧ್ಯಕ್ಷತೆಯಲ್ಲಿ ಮಹಾಸಭೆಯು ನೆರವೇರುವುದು. ಮಧ್ಯಾಹ್ನ 2.30ಕ್ಕೆ ನಡೆಯಲಿರುವ ಜಿಲ್ಲಾ ಸಮಾವೇಶವನ್ನು ಖ್ಯಾತ ಯಕ್ಷಗಾನ ಕಲಾವಿದ ಶ್ರೀ ದೇವಾನಂದ ಭಟ್ ಉದ್ಘಾಟನೆ ಮಾಡಲಿದ್ದಾರೆ. ಈ ಸಮಾವೇಶದಲ್ಲಿ ವಿವಿಧ ಪ್ರಶಸ್ತಿ ಹಾಗೂ ಪ್ರತಿಭಾ ಪುರಸ್ಕಾರಗಳನ್ನು ಪ್ರದಾನ ಮಾಡಲಾಗುವುದು. ಸಮಾಜ ಬಾಂಧವರು ಈ ಎಲ್ಲಾ ಕಾರ್ಯಕ್ರಮಗಳಲ್ಲಿ ಪಾಲ್ಗೊಳ್ಳಬೇಕೆಂದು ಸಭಾದ ಪ್ರಕಟಣೆಯು ತಿಳಿಸಿದೆ.

## ಡಾ। ಶಾಶ್ವತ್ ಸತ್ಯನಾಥ್‌ರಿಗೆ ಪ್ರಶಸ್ತಿ ಪ್ರದಾನ




ಕರ್ನಾಟಕ ರಾಜ್ಯ ಮಟ್ಟದ ಮನೋರೋಗ ಚಿಕಿತ್ಸಾ ವಿಧಗ್ಧ ವೈದ್ಯರುಗಳ 24ನೇ ವಾರ್ಷಿಕ ಸಮಾವೇಶದಲ್ಲಿ(ಕೆಎನ್‌ಸಿಐಪಿಸ್–2014) ಡಾ। ಶಾಶ್ವತ್ ಸತ್ಯನಾಥ್ ಮಂಡಿಸಿದ "ಎಟಿಟ್ಯೂಡ್ ಟುವರ್ಡ್ಸ್ ಮೆಂಟಲ್ ಇಲ್‌ನೆಸ್ ಇನ್ ಎ ಮೆಡಿಕಲ್ ಕಾಲೇಜ್" ಎಂಬ ವಿಷಯಕ್ಕೆ **ಬೆಸ್ಟ್ ಪ್ರೆಸಂಟೇಶನ್ ಎವಾರ್ಡ್** ಲಭಿಸಿದೆ. ಮಂಗಳೂರಿನ ಏನಪೋಯ ವೈದ್ಯಕೀಯ ವಿಶ್ವವಿದ್ಯಾನಿಲಯದಲ್ಲಿ ಅಂತಿಮ ವರುಷದ ಎಂ.ಡಿ. (ಸೈಕಾಲಜಿ) ಮಾಡುತ್ತಿರುವ ಇವರು ಎಂಬಿಬಿಎಸ್‌ನ್ನು ಎ.ಜೆ. ಶೆಟ್ಟಿ ಮೆಡಿಕಲ್ ಕಾಲೇಜಿನಲ್ಲಿ ಓದಿದ್ದರು.

ಕಾಸರಗೋಡು ಶಿವಬ್ರಾಹ್ಮಣ ಸಭಾ (ರಿ) ಇದರ ಅಧ್ಯಕ್ಷರಾದ ಡಾ। ಸತ್ಯನಾಥ್ (ಕಲ್‌ನಾಡ್ ನರ್ಸಿಂಗ್ ಹೋಮ್) ಮತ್ತು ಡಾ। ಗೀತಾ ದಂಪತಿಗಳ ಸುಪುತ್ರರಾದ ಇವರು ಇತ್ತೀಚೆಗೆ ವಿವಾಹವಾಗಿದ್ದು, ಪತ್ನಿ ಡಾ। ಚೇತನಾ ಹುಬ್ಬಳ್ಳಿಯ ಕಿಮ್ಸ್ ಮೆಡಿಕಲ್ ಕಾಲೇಜಿನಲ್ಲಿ ಎಂ.ಎಸ್. ಮಾಡುತ್ತಿದ್ದಾರೆ. ಡಾ। ಸತ್ಯನಾಥ್‌ರ ಸಾಧನೆಗೆ ಶ್ರೀ ಶಾರದಾ ಅಭಿನಂದನೆಗಳು.

## ಕೋಟೆಕಾರು–ನವರಾತ್ರಿ ಉತ್ಸವ

ಶ್ರೀ ಶೃಂಗೇರಿ ಶಾರದಾ ಪೀಠದ ಮಂಗಳೂರಿನ ಕೋಟೆಕಾರು ಶ್ರೀ ಶಂಕರ ಮಠದಲ್ಲಿ ಶ್ರೀ ಶಾರದಾ ಶರನ್ನವರಾತ್ರಿ ಮಹೋತ್ಸವವು ದಿನಾಂಕ 25–09–2014ರಿಂದ 03–10–2014ರ ವರೆಗೆ ವಿವಿಧ ಧಾರ್ಮಿಕ , ಸಾಂಸ್ಕೃತಿಕ ಕಾರ್ಯಕ್ರಮಗಳೊಂದಿಗೆ ನೆರವೇರಿತು.

ದಿನಾಂಕ 01–10–2014ರಂದು ಶ್ರೀ ಶಾರದಾ ಪೂಜೆ–ನಾಡಹಬ್ಬ ಕಾರ್ಯಕ್ರಮಗಳ ಉದ್ಘಾಟನೆಯನ್ನು ಮಂಗಳೂರಿನ ಖ್ಯಾತ ನ್ಯಾಯವಾದಿ ಶ್ರೀ ವಸಂತ ಅಡ್ಯಂತಾಯ ನೆರವೇರಿಸಿದರು. ಮರುದಿನ ಶ್ರೀ ಚಂಡಿಕಾಯಾಗ ನೆರವೇರಿದ್ದಲ್ಲದೆ, 3ನೇ ತಾರೀಕಿನಂದು ಶ್ರೀ ಶಾರದಾ ಸಂಗೀತ ವಿದ್ಯಾಲಯದ ವಿದ್ಯಾರ್ಥಿಗಳಿಗೆ ವಿದ್ಯಾರಂಭವನ್ನು ಮಾಡಲಾಯಿತು. ಪ್ರತಿದಿನ ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ವಿವಿಧ ಸಂಗೀತ ಕಛೇರಿಗಳು ನೆರವೇರಿದವು.

### ತುಲಾ ಮಾಸದ ವಿಶೇಷ ದಿನಗಳು

| | |
|---|---|
| 17–10–2014 | ತುಲಾ ಸಂಕ್ರಮಣ, |
| 19–10–2014 | ಸರ್ವೈಕಾದಶೀ |
| 21–10–2014 | ಪ್ರದೋಷಃ, ಜಲಪೂರಣಂ |
| 22–10–2014 | ನರಕ ಚತುರ್ದಶೀ |
| 23–10–2014 | ಅಮವಾಸ್ಯಾ, ದೀಪಾವಳೀ |
| 24–10–2014 | ಗೋಪೂಜಾ ಸ್ವಾತೀ ನಕ್ಷತ್ರಾರಂಭ |
| 03–11–2014 | ಸರ್ವೈಕಾದಶೀ |
| 04–11–2014 | ಪ್ರದೋಷಃ |
| 06–11–2014 | ಪೂರ್ಣಿಮಾ, ವಿಶಾಖಾ ನಕ್ಷತ್ರಾರಂಭ |
| 10–11–2014 | ಸಂಕಷ್ಟ ಚತುರ್ಥಿ ಚಂದ್ರೋದಯ ರಾತ್ರಿ–9.04ಕ್ಕೆ |
| 16–11–2014 | ವೃಶ್ಚಿಕ ಸಂಕ್ರಮಣ, |

### ಅಧ್ಯಕ್ಷರಾಗಿ ಶ್ರೀ ಎ.ಗೋಪಾಲಕೃಷ್ಣ ಹೆಬ್ಬಾರ್



ಕುಂದಾಪುರ ತಾಲೂಕು ಸ್ಥಾನಿಕ ಬ್ರಾಹ್ಮಣ ಸಂಘದ ಮಹಾಸಭೆಯು ದಿನಾಂಕ 28–09–2014ರಂದು ಕುಂದಾಪುರದ ಹೋಟೆಲ್ ಪಾರಿಜಾತದಲ್ಲಿ ನಡೆದು, ಮುಂದಿನ ಸಾಲಿಗೆ ಬೆಳ್ವೆ ಗ್ರಾಮದ ಅಬ್ಲಿಕಟ್ಟೆ ಶ್ರೀ ಗೋಪಾಲಕೃಷ್ಣ ಹೆಬ್ಬಾರರು ಅಧ್ಯಕ್ಷರಾಗಿ, ಕಾರ್ಯದರ್ಶಿಯಾಗಿ ಶ್ರೀ ಎಂ. ಸತ್ಯನಾರಾಯಣ ಹೆಬ್ಬಾರ್ ಮರೂರು (ಶಿಕ್ಷಕರು) ಇವರು ಆರಿಸಲ್ಪಟ್ಟಿರುತ್ತಾರೆ.

## ಶ್ರೀಶಾರದಾ ದೇವಸ್ಥಾನ, ಶಾರದಾನಗರ, ಕುಂಜಿಬೆಟ್ಟು , ಉಡುಪಿ

### ಈ ತಿಂಗಳ ಕಾರ್ಯಕ್ರಮಗಳು

**(ದರ್ಶನದ ಸಮಯ ಬೆಳಿಗ್ಗೆ 8-00ರಿಂದ 12-00, ಸಂಜೆ 3-30ರಿಂದ 8-00)**

ಮಂಗಳಾರತಿ : ಪ್ರತಿ ದಿನ ಬೆಳಿಗ್ಗೆ 8-00, ಮಧ್ಯಾಹ್ನ 12-00 ಹಾಗೂ ರಾತ್ರಿ 7-30 ಗಂಟೆಗೆ

ಪ್ರತಿ ಸೋಮವಾರ: **''ಸತ್ಸಂಗದವರಿಂದ ಭಜನೆ''** ಸಂಜೆ 6-00 ಗಂಟೆಯಿಂದ

ಪ್ರತಿ ಮಂಗಳವಾರ: **''ಸೌಂದರ್ಯಲಹರಿ ಪಾರಾಯಣ''** ಸಂಜೆ 5-00 ಗಂಟೆಯಿಂದ (ಮಹಿಳಾ ವಿಭಾಗದಿಂದ)

ಪ್ರತಿ ಶುಕ್ರವಾರ : **ಲಲಿತಾ ಸಹಸ್ರನಾಮ ಮತ್ತು ದೇವರ ಭಜನೆ** ಸಂಜೆ 5-00 ಗಂಟೆಯಿಂದ (ಮಹಿಳಾ ವಿಭಾಗದಿಂದ)

ಪ್ರತಿ ಆದಿತ್ಯವಾರ : ಸ್ವಾಧ್ಯಾಯ ಸಮಿತಿಯವರಿಂದ **''ಪಾರಾಯಣ''** ಸಂಜೆ ಗಂಟೆ 4-30ರಿಂದ

**ಸಂಕಷ್ಟಹರ ಚತುರ್ಥಿಯಂದು (ತಾ.10-11-2014) ''ಸಾಮೂಹಿಕ ಗಣಹೋಮ'' ಬೆಳಿಗ್ಗೆ ಗಂಟೆ 10-00ರಿಂದ (ಸೇವಾ ಶುಲ್ಕ ರೂ.51/-)**


**ತಾ.28-10-2014 ಪಂಚಮಿಯಂದು ''ನಾಗದೇವರಿಗೆ ತನುಸೇವೆ'' ಬೆಳಿಗ್ಗೆ 9-00ರಿಂದ ಮಧ್ಯಾಹ್ನ 12-00 ಗಂಟೆಯ ತನಕ**

**ತಾ.28-10-2014 ಮೂಲಾ ನಕ್ಷತ್ರದ ದಿನದಂದು ಶ್ರೀದೇವಿಗೆ ಸಹಸ್ರನಾಮಾರ್ಚನೆ (ಸಮಯ ಸಂಜೆ 5-00ರಿಂದ 6-00ರ ವರೆಗೆ)**

**ಭಕ್ತಾದಿಗಳೆಲ್ಲರಿಗೂ ಆದರದ ಸ್ವಾಗತ**

## ನಿಧನ

### ವೈ ಶಂಕರ ನಾರಾಯಣ ರಾವ್



ಪಡುಬಿದ್ರೆ ರಾಮನಗರದ ನಿವಾಸಿ ವೈ. ಶಂಕರನಾರಾಯಣರಾಯರು (70ವರ್ಷ) ದಿನಾಂಕ 29–09–2014ರಂದು ನಿಧನರಾದರು. ಸಿಂಡಿಕೇಟ್ ಬ್ಯಾಂಕ್ ಅಧಿಕಾರಿಯಾಗಿ, ಶಾಖಾ ಪ್ರಬಂಧಕರಾಗಿ ಜಿಲ್ಲೆ ಹಾಗೂ ಇತರ ಜಿಲ್ಲೆಗಳಲ್ಲಿರುವ ಬ್ಯಾಂಕ್‌ನ ಶಾಖೆಗಳಲ್ಲಿ ಕಾರ್ಯ ನಿರ್ವಹಿಸಿದ್ದ ವೈ. ಶಂಕರನಾರಾಯಣರಾಯರು ಜನಾನುರಾಗಿಗಳಾಗಿದ್ದರು.

ನಿವೃತ್ತಿಯ ನಂತರ ಓದುವುದನ್ನು ಹವ್ಯಾಸವನ್ನಾಗಿ ಮಾಡಿಕೊಂಡಿರುವ ಮೃತರು ಸಾಹಿತ್ಯಿಕ ಚಟುವಟಿಕೆಗಳಲ್ಲಿ ತಮ್ಮನ್ನು ತೊಡಗಿಸಿಕೊಂಡರು. ಬೇರೆ ಬೇರೆ ಪತ್ರಿಕೆಗಳಲ್ಲಿ ಅವರ ಲೇಖನಗಳು ಪ್ರಕಟಗೊಂಡುದ್ದವು. ಉಡುಪಿಯ ಶ್ರೀ ಶಾರದಾ ಪತ್ರಿಕೆಯ ಬಗ್ಗೆ ಉತ್ತಮ ಅಭಿಪ್ರಾಯ ಹೊಂದಿರುವ ಇವರು ಕಳೆದ ಹಲವು ವರ್ಷಗಳಲ್ಲಿ ವೈಚಾರಿಕ,ವಿಡಂಬನಾತ್ಮಕ, ಮನೋರಂಜಕವಾದ ಹತ್ತು ಹಲವು ಲೇಖನಗಳನ್ನು ಬರೆದು ಪತ್ರಿಕೆಯ ಮೌಲ್ಯ ಹೆಚ್ಚಲು ಕಾರಣರಾಗಿದ್ದರು. ಹಿಂದೆ ನಡೆದ ‘ಶಾರದಾ ಸಂವಾದ’ ಪತ್ರಿಕಾ ಸಮಾವೇಶದಲ್ಲಿ ಮುಖ್ಯ ಭಾಷಣಕಾರರಾಗಿಯೂ ಕಾರ್ಯ ನಿರ್ವಹಿಸಿದ್ದರು. ಮೃತರು ಪತ್ನಿ, ಓರ್ವ ಪುತ್ರ, ಓರ್ವ ಪುತ್ರಿ ಸಹಿತ ಅಪಾರ ಬಂಧುವರ್ಗವನ್ನು ಅಗಲಿದ್ದಾರೆ. ವೈ. ಶಂಕರನಾರಾಯಣರಾಯರ ನಿಧನಕ್ಕೆ ಶ್ರೀ ಶಾರದಾ ಬಳಗವು ಶ್ರದ್ಧಾಂಜಲಿ ಅರ್ಪಿಸುತ್ತದೆ.

★★★ ★★★

### ಸರೋಜಾ ರಾವ್

ದಿ। ಉದ್ಯಾವರ ಅನಂತ ಪದ್ಮನಾಭ ರಾವ್ ಅವರ ಧರ್ಮಪತ್ನಿ ಸರೋಜಾ ರಾವ್(68) ದಿನಾಂಕ22–09–2014ರಂದು ನಿಧನರಾದರು. ಉಡುಪಿಯ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘದ ಅಧ್ಯಕ್ಷ ಶ್ರೀ ಪ್ರಫುಲ್ಲಚಂದ್ರರಾಯರ ಚಿಕ್ಕಮ್ಮ (ತಂದೆಯ ತಮ್ಮನ ಹೆಂಡತಿ)ನವರಾದ ಮೃತರು ಓರ್ವ ಪುತ್ರ, ಓರ್ವ ಪುತ್ರಿ ಸಹಿತ ಅಪಾರ ಬಂಧು ಬಾಂಧವರನ್ನು ಅಗಲಿದ್ದಾರೆ.

★★★ ★★★

### ಸರಸ್ವತಿ ರಾವ್

ಉಡುಪಿ ತಾಲೂಕು ಎಲ್ಲೂರು ಗ್ರಾಮದ ದಿವಂಗತ ವ್ಯಾಸರಾಯರ ಧರ್ಮಪತ್ನಿ ಸರಸ್ವತಿ ರಾವ್ (92) ದಿನಾಂಕ 03-10-2014ರಂದು ವೃದ್ಧಾಪ್ಯದ ಕಾರಣದಿಂದ ನಿಧನರಾದರು.ಮೃತರು ಐವರು ಪುತ್ರರು, ಇಬ್ಬರು ಹೆಣ್ಣುಮಕ್ಕಳ ಸಹಿತ ಅಪಾರ ಬಂಧುಬಾಂಧವರನ್ನು ಅಗಲಿದ್ದಾರೆ.

★★★ ★★★

### ವೈ. ಶಂಕರ ಶಾಸ್ತ್ರಿ

ಉಡುಪಿ ತಾಲೂಕು ಎಲ್ಲೂರು ದಿ। ಲಕ್ಷ್ಮೀನಾರಾಯಣ ಜ್ಯೋತಿಷ್ಕರ ಪ್ರಥಮ ಪುತ್ರ ವೈ. ಶಂಕರ ಶಾಸ್ತ್ರಿಯವರು (86) ವೃದ್ಧಾಪ್ಯದ ಕಾರಣದಿಂದ ದಿನಾಂಕ 16-09-2014ರಂದು ಸ್ವಗೃಹದಲ್ಲಿ ನಿಧನರಾದರು. ಇತ್ತೀಚೆಗೆ ನಿಧನರಾದ ಡಾ। ಸರ್ವಜ್ಞಮೂರ್ತಿಯವರ ಸಹೋದರರಾದ ಮೃತರು ನಾಲ್ವರು ಸಹೋದರರು, ಇಬ್ಬರು ಸಹೋದರಿಯರ ಸಹಿತ ಅಪಾರ ಬಂಧುಬಾಂಧವರನ್ನು ಅಗಲಿದ್ದಾರೆ.

★★★ ★★★

### ಯು. ಪಿ. ವೆಂಕಟರಾವ್

ದ.ಕ.ಜಿಲ್ಲಾ ಕಂಬಳಿ ಮೂಲೆಯ ಉಬರಡ್ಕ ಪಿ. ವೆಂಕಟ್ರಾಯರು (69) ದಿನಾಂಕ 22-09-2014ರಂದು ಸ್ವಗೃಹದಲ್ಲಿ ನಿಧನರಾದರು.

ಉಬರಡ್ಕ ವೆಂಕಟ್ರಾಯರೆಂದೇ ಪ್ರಸಿದ್ಧರಾಗಿದ್ದ ಇವರು ಸುಮಾರು ಎರಡೂವರೆ ದಶಕಗಳ ಕಾಲ ತಮ್ಮ ಸ್ವಇಚ್ಛೆಯಿಂದ ನಮ್ಮ ಸಮಾಜದ ವಧೂವರರ ಮಾಹಿತಿಯ ಸಂಗ್ರಹವನ್ನು ಮಾಡಿಕೊಂಡಿದ್ದು, ಈ ಸಂಬಂಧ ಕರ್ನಾಟಕ ರಾಜ್ಯ ಮಾತ್ರವಲ್ಲದೇ ಹೊರ ರಾಜ್ಯಗಳಿಗೂ ಆಗಾಗ್ಗೆ ಪ್ರವಾಸ ಮಾಡುತ್ತಿದ್ದರು. ಇವರ ಪ್ರಯತ್ನದಿಂದ ಹಲವಾರು ವಧೂವರರ ಹೊಂದಾಣಿಕೆಯಾಗಿ ವಿವಾಹಗಳು ನೆರವೇರಿತ್ತು. ಸಾಮಾಜಿಕ ಕಳಕಳಿಯನ್ನು ಹೊಂದಿದ್ದ ಮೃತರು ಪತ್ನಿ ಸರಸ್ವತಿ, ಇಬ್ಬರು ಪುತ್ರರು ಹಾಗೂ ಮಾಜಿ ಜಿಲ್ಲಾ ಪಂಚಾಯತ್ ಅಧ್ಯಕ್ಷೆ ಶ್ರೀಮತಿ ಮಾಲತಿ ರಾವ್ ಸಹಿತ ಮೂವರು ಪುತ್ರಿಯರು ಮತ್ತು ಅಪಾರ ಬಂಧುಬಾಂಧವರನ್ನು ಅಗಲಿದ್ದಾರೆ.

# ವೈದ್ಯಕೀಯ ವೇದಿಕೆ–ಆರೋಗ್ಯ ಮಾಹಿತಿ



ಡಾ। ವೈ. ಸುದರ್ಶನ ರಾವ್

**ಪ್ರಶ್ನೆ: ದುಶ್ಚಟಗಳು ಮತ್ತು ನಮ್ಮ ಆರೋಗ್ಯ**

**ಉತ್ತರ :** ಕೆಟ್ಟ ಪರಿಣಾಮಗಳನ್ನು ಉಂಟು ಮಾಡುವ ನಮ್ಮ ಕೆಲವು ಹವ್ಯಾಸಗಳನ್ನು ದುಶ್ಚಟಗಳೆಂದು ಕರೆಯುತ್ತೇವೆ. ಈ ದುಶ್ಚಟಗಳು ಕೇವಲ ದೇಹಕ್ಕೆ ಮಾತ್ರವಲ್ಲ ಕೌಟುಂಬಿಕವಾಗಿ ಹಾಗೂ ಸಾಮಾಜಿಕವಾಗಿ ಕೂಡಾ ನೂರಾರು ದುಷ್ಪರಿಣಾಮಗಳನ್ನು ಬೀರುತ್ತವೆ. ದೇಶಕ್ಕೂ ದೊಡ್ಡ ಹೊರೆಯಾಗಿ ಪರಿಣಮಿಸುತ್ತವೆ.

ಪ್ರಪಂಚದಾದ್ಯಂತ ಸರ್ವೇಸಾಮಾನ್ಯವಾಗಿ ಜನರಲ್ಲಿರುವ ನಾಲ್ಕು ದುಶ್ಚಟಗಳನ್ನು ಉಲ್ಲೇಖಿಸಿ, ಅದರ ಪರಿಣಾಮಗಳನ್ನು ಚರ್ಚಿಸಿದ್ದೇನೆ. ಮನುಷ್ಯ ಬೆಳೆಸಿಕೊಳ್ಳಬಹುದಾದ ದುಶ್ಚಟಗಳು ಇನ್ನೂ ಅನೇಕ ವಿರಬಹುದು, ಆದರೂ ಅವುಗಳ ದುಷ್ಪರಿಣಾಮಗಳು ಹೆಚ್ಚು ಕಡಿಮೆ ಈ ನಾಲ್ಕರ ಪರಿಣಾಮಗಳಂತೆ ಇದೆ. ಈ ಮುಖ್ಯ ನಾಲ್ಕು ದುಶ್ಚಟಗಳಾವುವೆಂದರೆ ಮದ್ಯಪಾನ, ತಂಬಾಕುಸೇವನೆ, ಅಮಲುಪದಾರ್ಥಗಳ ಸೇವನೆ ಹಾಗೂ ಅನೈತಿಕ ಲೈಂಗಿಕಸಂಪರ್ಕ, ಈ ನಾಲ್ಕು ದುಶ್ಚಟಗಳಿಂದಾಗಿ ಸಾವಿರಾರು ವರ್ಷಗಳಿಂದ ಮನುಕುಲವು ಅನುಭವಿಸಿರುವ ಸಾವುನೋವುಗಳು ಅಪಾರ.

ಯಾಕೆ ಜನರು ದುಶ್ಚಟಗಳಿಗೆ ಬಲಿಯಾಗುತ್ತಾರೆ?

ಮೊತ್ತಮೊದಲನೆಯ ಕಾರಣ ಸಹವಾಸ ದೋಷ. ಸಹವಾಸ ದೋಷವನ್ನು ದೂಷಿಸುವುದಾದರೆ ಅದು ಮೊದಲು ಆರಂಭವಾಗುವುದೇ ತಮ್ಮ ಸ್ವಂತಮನೆಯಲ್ಲಿ. ಹೆತ್ತವರಿಗೆ ಇರುವ ದುಶ್ಚಟಗಳನ್ನು ಮಕ್ಕಳು ಬೇಗನೇ ಅನುಕರಿಸುತ್ತಾರೆ, ಕಲಿಯುತ್ತಾರೆ. ಇನ್ನು ದುಶ್ಚಟಗಳಿಗೆ ಬಲಿಯಾಗುವ ಇತರ ಕಾರಣಗಳೆಂದರೆ ಯುವಕ ಯುವತಿಯರು ತಮ್ಮ ಗೆಳೆಯರ ಪ್ರಭಾವದಿಂದಾಗಿ, ಒತ್ತಾಯದಿಂದಾಗಿ, ತಮಾಶೆಗಾಗಿ, ಒಮ್ಮೆ ಉಪಯೋಗಿಸಿ ನೋಡೋಣ ಎಂಬ ಹುಮ್ಮಸ್ಸಿನಿಂದಾಗಿ, ಮಜಾಮಾಡಬೇಕೆಂಬ ತುಡಿತದಿಂದಾಗಿ, ಸಿನಿಮಾಗಳು ಹಾಗೂ ಇತರ ಮಾಧ್ಯಮಗಳು ವೈಭವೀಕರಿಸುವ ದೃಶ್ಯಗಳಿಂದಾಗಿ,, ತಾನು ಮನಸೋತಿರುವ ಹೀರೋನ ಅನುಕರಣೆ ಮಾಡುವುದರಿಂದಾಗಿ ಇನ್ನು ಕೆಲವೊಮ್ಮೆ, ಅದರ ಸತ್ಪರಿಣಾಮಗಳ (?) ಬಗೆಗಿನ ಅತಿರಂಜಿತ ಕಥೆಗಳ ವರ್ಣನೆಗೆ ಮರುಳಾಗಿ ರುಚಿನೋಡಿದವರು, ಒಮ್ಮೆ ರುಚಿ ನೋಡಿದವರನ್ನು ತನ್ನ ದಾಸರನ್ನಾಗಿಸುವ (addiction) ಈ ದುಶ್ಚಟಗಳ ವಿಶೇಷ ಶಕ್ತಿಯಿಂದಾಗಿ ಅದರ ವ್ಯಸನಿಗಳಾಗಿ ಬಿಡುತ್ತಾರೆ.

ಮಾನಸಿಕ ಖಾಯಿಲೆ ಅಥವಾ ಮಾನಸಿಕ ಕ್ಲೇಶ ಅಥವಾ ಕ್ಷೋಭೆ ಈ ದುಶ್ಚಟಗಳಿಗೆ ಬಲಿಯಾಗಲು ಇನ್ನೊಂದು ಕಾರಣ. ಮನಸ್ಸಿನ ದುಗುಡ, ಭಯ, ಹಿಂಜರಿಕೆ, ತುಮುಲಗಳನ್ನು ತಾತ್ಕಾಲಿಕವಾಗಿ ಮರೆಮಾಡುವ ಗುಣ ಈ ದುಶ್ಚಟಗಳಿಗಿರುವುದರಿಂದ ಇಂತಹಾ ಅಳ್ಳೆ ಮನಸ್ಸಿನವರು ಈ ದುಶ್ಚಟಗಳಿಗೆ ಸುಲಭದಲ್ಲಿ ಬಲಿಯಾಗುತ್ತಾರೆ

ಬಡತನ, ಅಜ್ಞಾನ, ಮೂಢನಂಬಿಕೆಗಳಿಂದ ಬಳಲುತ್ತಿರುವ ಸಮಾಜಗಳ ಸದಸ್ಯರು ತಮಗರಿವಿಲ್ಲದೇ ಈ ದುಶ್ಚಟಗಳ ಸುಳಿವಲ್ಲಿ ಸಿಲುಕಿಕೊಳ್ಳುವುದು ಜಾಸ್ತಿ. ಎಷ್ಟೋ ಬಾರೀ ಈ ದುಶ್ಚಟಗಳು ಅವರ ಸಂಸ್ಕೃತಿಯ ಭಾಗವಾಗಿರುವುದೂ ಉಂಟು (ಆಗ ಅವರಿಗದು ದುಶ್ಚಟಗಳೆಂದು ಅನಿಸುವುದಿಲ್ಲ). ಇಂತಹವರು ಬಾಲ್ಯದಲ್ಲೇ ಈ ದುಶ್ಚಟಗಳನ್ನು ಕಲಿತಿರುತ್ತಾರೆ. ಹೀಗೆ ಬಾಲ್ಯದಲ್ಲಿ ಅಂಟಿಸಿಕೊಂಡ ಈ ಚಟಗಳು ಕೆಟ್ಟವು ಎಂದರಿವಾಗುವಷ್ಟರಲ್ಲಿ ಅದರಿಂದ ಬಿಡಿಸಿಕೊಳ್ಳಲು ಸಾಧ್ಯವಾಗದಷ್ಟು ಅದರ ದಾಸರಾಗಿರುತ್ತಾರೆ. ತನ್ನ ಸಂಬಂಧಿಕರು ಹಾಗೂ ಗೆಳೆಯರು ಇದರ ವ್ಯಸನಿಗಳೇ ಆಗಿರುವಾಗ ಈ ಚಟದಿಂದ ಬಿಡಿಸಿಕೊಳ್ಳುವ ಪ್ರಯತ್ನಕ್ಕೆ ಬೆಂಬಲ ಸಿಗದೇ ವ್ಯಸನಿಯಾಗಿಯೇ ಮುಂದುವರಿಯುವವವರೇ ಹೆಚ್ಚು.

ಈ ದುಶ್ಚಟಗಳಲ್ಲಿ ಅತೀ ಸಾಮಾನ್ಯವಾದ ಚಟವಾದ ಮದ್ಯಪಾನದಿಂದಾಗುವ ದುಷ್ಪರಿಣಾಮಗಳು ಊಹನೆಗೂ ನಿಲುಕದ್ದಾಗಿದೆ. ಮದ್ಯಪಾನದಿಂದ ದೇಹದ ಅಂಗಗಳಲ್ಲಿ ದೊಡ್ಡ ಹೊಡೆತ ತಿನ್ನುವುದು ಪಿತ್ತಜನಕಾಂಗ. ಆಲ್ಕೋಹಾಲ್ ಪಿತ್ತಜನಕಾಂಗದ ಜೀವಕೋಶಗಳನ್ನು ನಿಧಾನವಾಗಿ ನಾಶಮಾಡುತ್ತದೆ. ಅದರಿಂದಾಗಿ ಪಿತ್ತಜನಕಾಂಗದ ಗಾತ್ರ ಕುಗ್ಗಿ ಅದರ ಕ್ಷಮತೆ ಕಡಿಮೆಯಾಗುತ್ತದೆ. ಈ ಖಾಯಿಲೆಯನ್ನು ಸಿರೋಸಿಸ್ ಆಫ್ ಲಿವರ್ ಎಂದು ಕರೆಯುತ್ತಾರೆ. ಈ ಖಾಯಿಲೆಯಲ್ಲಿ ಕಾಮಾಲೆಯಾಗುವುದು, ಹೊಟ್ಟೆಯಲ್ಲಿ ನೀರು ತುಂಬುವುದು, ಕಾಲಿನಲ್ಲಿ ಬಾವು, ರಕ್ತವಾಂತಿ, ಕುಗ್ಗಿದ ರೋಗನಿರೋಧಕ ಶಕ್ತಿ ಇರುತ್ತದೆ. ಗುಣಪಡಿಸಲು ಕಷ್ಟವಾದ ಅಥವಾ ಅಸಾಧ್ಯವಾದ ಖಾಯಿಲೆ ಇದು. ಈರೋಗಿಗಳಿಗೆ ಪಿತ್ತಜನಕಾಂಗದ ಕ್ಯಾನ್ಸರ್ ಬರುವ ಸಾಧ್ಯತೆ ಹೆಚ್ಚು. ಮದ್ಯಪಾನದಿಂದಾಗಿ ಹಾನಿಗೀಡಾಗುವ ಇನ್ನೊಂದು ಅಂಗವೆಂದರೆ ಜೀರ್ಣಾಂಗವ್ಯೂಹ. ಇದರ ಭಾಗವಾದ ಮೇದೋಜೀರಕ ಗ್ರಂಥಿಯ ಊತವು ಈ ದುಶ್ಚಟಕ್ಕೇ ಮೀಸಲಾದ ವಿಶಿಷ್ಟ ಖಾಯಿಲೆ. ಇದಲ್ಲದೆ ಅನ್ನನಾಳ, ಜಠರ, ಕರುಳಿನಲ್ಲಿ ಹುಣ್ಣು, ಬಾಯಿಯ, ಅನ್ನನಾಳದ, ಜಠರದ, ದೊಡ್ಡಕರುಳಿನ, ಪಿತ್ತನಾಳ ಹಾಗೂ ಮಲಾಶಯದ ಕ್ಯಾನ್ಸರ್‌ಗಳಿಗೂ ಮದ್ಯಪಾನಕ್ಕೂ ನೇರ ಸಂಬಂಧ ಇದೆ. ಇದಲ್ಲದೇ ಸ್ತನದ ಕ್ಯಾನ್ಸರ್ ಹಾಗೂ ಧ್ವನಿಪೆಟ್ಟಿಗೆಯ ಕ್ಯಾನ್ಸರ್ ಸಾಧ್ಯತೆಯೂ ಮದ್ಯಪಾನಿಗಳಲ್ಲಿ ಹೆಚ್ಚು. ಸಿಹಿಮೂತ್ರ ರೋಗ, ಅಧಿಕ ರಕ್ತದೊತ್ತಡ, ಹೃದಯದ ಕ್ಷಮತೆ ಕಡಿಮೆಯಾಗುವುದು, ಥೈರಾಯ್ಡ್ ಗ್ರಂಥಿಯ ಕ್ಷಮತೆ ಕಡಿಮೆಯಾಗುವುದು, ರಕ್ತಹೀನತೆ, ಗೌಟ್‌ಖಾಯಿಲೆ, ಷಂಡತನ, ನಿರ್ವೀರ್ಯತನ, ಗರ್ಭಪಾತ, ಅಪಸ್ಮಾರ, ನರದೌರ್ಬಲ್ಯ, ಡಿಮೆನ್ಶಿಯಾ (ಮೆದುಳಿನ ಜೀವಕೋಶಗಳು ನಶಿಸಿ ಹೆಡ್ಡರಂತೆ ವರ್ತಿಸುವುದು) ಈ ಎಲ್ಲಾ ಖಾಯಿಲೆಗಳಿಗೆ ತುತ್ತಾಗುವ ಸಾಧ್ಯತೆ ಮದ್ಯಪಾನಿಗಳಲ್ಲಿ ಹಲವಾರು ಪಟ್ಟು ಹೆಚ್ಚಿದೆ. ಮದ್ಯಪಾನವು ಸರಿಯಾದ ನಿರ್ಧಾರ ತೆಗೆದುಕೊಳ್ಳುವ ಶಕ್ತಿಯನ್ನು ಕಡಿಮೆಮಾಡುತ್ತದೆ. ಮದ್ಯಪಾನದಿಂದಾಗಿ ದೇಹದ ಸಾಮರ್ಥ್ಯವು ಕಡಿಮೆಯಾಗುವುದರಿಂದ ಕೈಹಿಡಿದ ಕೆಲಸವನ್ನು ಸರಿಯಾಗಿ ಮುಗಿಸಲು ಅವರಿಂದ ಸಾಧ್ಯವಾಗುವುದಿಲ್ಲ. ಅದೇ ವೇಳೆಗೆ ಮದ್ಯಪಾನವು ದುಡುಕು ನಿರ್ಧಾರಗಳನ್ನು ತೆಗೆದುಕೊಳ್ಳಲು ಪ್ರೇರೇಪಿಸುತ್ತದೆ. ಹಾಗಾಗಿ ಮದ್ಯಪಾನಿಗಳು ಕುಕೃತ್ಯಗಳಲ್ಲಿ ಭಾಗಿಯಾಗುತ್ತಾರೆ. ಮದ್ಯಪಾನ ಮಾಡಿದಾಗ ದೇಹದ ಮೇಲಿನ ಹತೋಟಿ ಕಡಿಮೆಯಾಗುತ್ತದೆ. ದೃಷ್ಟಿಮಂದವಾಗುತ್ತದೆ ಹಾಗಾಗಿ ಮದ್ಯಪಾನಿಗಳು ಅಫಘಾತಕ್ಕೆ ಬಲಿಯಾಗುತ್ತಾರೆ. ಮದ್ಯವ್ಯಸನಿಗಳು ಮದ್ಯಪಾನ ಮಾಡಿರದಿದ್ದರೂ ಮೇಲೆ ಹೇಳಿದ ಖಾಯಿಲೆಗಳೊಂದರಿಂದ ಬಳಲುತ್ತಿರಬಹುದಾದ್ದರಿಂದ ಅವರಿಂದ ಯಾವುದೇ ಕೆಲಸದಲ್ಲಿ ಪರಿಪೂರ್ಣತೆಯನ್ನು ನಿರೀಕ್ಷಿಸುವುದು ಸಾಧ್ಯವಿಲ್ಲ. ಮದ್ಯಪಾನದ ವ್ಯಸನಿಗಳು ನಿಯಮಿತವಾಗಿ ಮದ್ಯಸೇವನೆ ಮಾಡದಿದ್ದರೆ ಮೆದುಳು ಸರಿಯಾಗಿ ಕೆಲಸ ಮಾಡದೆ ಕೈಕಾಲು ನಡುಗುವುದು, ಬುದ್ಧಿಭ್ರಾಂತರಂತೆ ವರ್ತಿಸುವುದು, ಅಪಸ್ಮಾರ ಇತ್ಯಾದಿ ಚಿಹ್ನೆಗಳಿಂದ ಬಳಲಿ ಸಾವೂ ಸಂಭವಿಸಬಹುದು. ಕಲಬೆರಕೆ ಮದ್ಯಪಾನದಿಂದ ದೃಷ್ಟಿನಾಶ ಹಾಗೂ ಸಾವು ಸಂಭವಿಸುವ ಸಾಧ್ಯತೆ ಇದೆ.

ಮನುಷ್ಯನಿಗೆ ಬರುವ ಖಾಯಿಲೆಗಳಲ್ಲಿ ಶೇಕಡಾ ಹತ್ತರಷ್ಟು ಖಾಯಿಲೆ ತಂಬಾಕು ಸೇವನೆಗೆ ಸಂಬಂಧಿಸಿದ್ದು ಎಂದು ವೈದ್ಯಕೀಯ ವರದಿಯೊಂದು ಅಂದಾಜು ಮಾಡಿದೆ. ತಂಬಾಕಿನ ಹೊಗೆಯನ್ನು ಬೀಡಿ, ಸಿಗರೇಟು, ಹುಕ್ಕಾದ ರೂಪದಲ್ಲೂ, ತಂಬಾಕಿನ ಪುಡಿಯನ್ನು ನಶ್ಯ ಹಾಗೂ ಜರ್ದಾ ರೂಪದಲ್ಲೂ ಸೇವಿಸುತ್ತಾರೆ. ಯಾವ ರೂಪದಲ್ಲಿ, ಯಾವ ಮಾರ್ಗದಲ್ಲಿ ಸೇವಿಸಿದರೂ ಅದರಲ್ಲಿ ಇಡೀ ದೇಹಕ್ಕೆ ಹಾನಿ ಮಾಡಬಲ್ಲ ನಿಕೋಟಿನ್ ಎಂಬ ವಿಷವಿದೆ. ನಿಕೋಟಿನ್‌ಗೆ ಮನಸ್ಸಿನ ದುಗುಡ, ತುಮುಲಗಳನ್ನು ದೂರ ಮಾಡಿ ಮನಸ್ಸನ್ನು ತಾತ್ಕಾಲಿಕವಾಗಿ ನಿರುಮ್ಮಳಗೊಳಿಸುವ ಶಕ್ತಿ ಇರುವುದರಿಂದ ಅದನ್ನು ಜನರು ಸೇವಿಸುತ್ತಾರೆ. ಹೀಗೆ ಸೇವಿಸಿದವರು, ಅದನ್ನು ಪುನಃ ಪುನಃ ಸೇವಿಸಬೇಕು ಎಂದು ಹಾತೊರೆಯುವಂತೆ ಮಾಡುವ ಶಕ್ತಿಯೂ ಅದಕ್ಕಿದೆ.

ತಂಬಾಕಿನಲ್ಲಿ ನಿಕೋಟಿನ್ ಮಾತ್ರವಲ್ಲದೇ ಇನ್ನೂ ಅನೇಕ ರಾಸಾಯನಿಕಗಳು ಇದ್ದು ಅವುಗಳಲ್ಲಿ ಕೆಲವು ನಮ್ಮ ಜೀನ್‌ನ ರಚನೆಯನ್ನು ಹಾಳು ಗೆಡವಿ ಜೀವಕೋಶಗಳು ಅಂಕೆಯಿಲ್ಲದೆ ವಿಭಜನೆ ಹೊಂದುವಂತೆ ಮಾಡಬಲ್ಲವು. ಇದರಿಂದಾಗಿ ತಂಬಾಕು ಸೇವನೆಯಿಂದಾಗಿ ದೇಹದ ಅನೇಕ ಅಂಗಗಳಲ್ಲಿ ಕ್ಯಾನ್ಸರ್ ಕಾಯಿಲೆ ಬರುತ್ತದೆ. ದೇಹಕ್ಕೆ ಬರಬಹುದಾದ ಶೇಕಡಾ ಮೂವತ್ತರಷ್ಟು ಕ್ಯಾನ್ಸರ್ ಕಾಯಿಲೆಗೆ ತಂಬಾಕಿನ ನಂಟಿದೆ. ತಂಬಾಕು ಸೇವನೆಗೆ ಸಿಗರೇಟನ್ನು ಸ್ವತಃ ಸೇದಬೇಕೆಂದೇನಿಲ್ಲ. ಸಿಗರೇಟು ಎಳೆಯುವವರ ಮೂವತ್ತು ಅಡಿ ಸುತ್ತಮುತ್ತ ಇರುವವರೂ ಕೂಡಾ ಅದರ ಬಾಧಕಗಳನ್ನು ಅನುಭವಿಸಬೇಕಾಗುತ್ತದೆ.

ತಂಬಾಕು ಸೇವನೆಗೂ ಬಾಯಿಯ, ಗಂಟಲಿನ, ಧ್ವನಿಪಟ್ಟಿಗೆಯ, ಶ್ವಾಸನಾಳದ ಹಾಗೂ ಶ್ವಾಸಕೋಶದ, ಅನ್ನನಾಳದ, ಜಠರದ, ಮೂತ್ರಕೋಶದ ಹಾಗೂ ಮೇದೋಜೀರಕ ಗ್ರಂಥಿಯ ಕ್ಯಾನ್ಸರ್‌ಗಳಿಗೂ ನೇರಸಂಬಂಧವಿದೆ. ಇದಲ್ಲದೆ ರಕ್ತದ ಕ್ಯಾನ್ಸರ್, ಮೂಗಿನ, ಪಿತ್ತಜನಕಾಂಗದ, ಪಿತ್ತಕೋಶದ, ಸಣ್ಣಕರುಳಿನ, ಮೂತ್ರಜನಕಾಂಗದ, ಗರ್ಭಕೋಶದ ಬಾಯಿಯ ಹಾಗೂ ಸ್ತನದ ಕ್ಯಾನ್ಸರ್‌ಗಳಿಗೂ ಸಂಬಂಧವಿದೆ. ಕ್ಯಾನ್ಸರ್ ಹೊರತುಪಡಿಸಿ ಇನ್ನೂ ಅನೇಕ ಖಾಯಿಲೆಗಳಿಗೆ ತಂಬಾಕು ಸೇವನೆ ಕಾರಣೀಭೂತವಾಗಿದೆ. ಸತತವಾಗಿ ತಂಬಾಕಿನ ಹೊಗೆ ಸೇವಿಸುವುದರಿಂದ ಶ್ವಾಸಕೋಶ ಹಾಗೂ ಶ್ವಾಸನಾಳಗಳಿಗೆ ಹಾನಿಯಾಗಿ ಉಬ್ಬಸ ಖಾಯಿಲೆ ಬರುತ್ತದೆ. ಕ್ಷಯರೋಗಕ್ಕೆ ತುತ್ತಾಗುವ ಸಾಧ್ಯತೆ ಇವರಲ್ಲಿ ಜಾಸ್ತಿ. ರಕ್ತನಾಳಗಳಲ್ಲಿ ಕೊಲೆಸ್ಟಿರಾಸ್ ಜಮೆಯಾಗಿ ದೇಹದ ವಿವಿಧ ಅಂಗಗಳ ರಕ್ತನಾಳಗಳು ಮುಚ್ಚಿಹೋಗುವ ಖಾಯಿಲೆಯಾದ ಅತಿ ರೋಸ್ಕಿಲ್‌ರೋಸಿಸ್‌ಗೆ ಸಿಗರೇಟು ಸೇವನೆಯೇ ಮುಖ್ಯಕಾರಣ. ಕಾಲಿನ ರಕ್ತನಾಳಗಳು ಮುಚ್ಚಿಕೊಂಡು ರಕ್ತ ಸಂಚಾರವಿಲ್ಲದೆ ಕಾಲುಕೊಳೆತು ಹೋಗುವ ಕಾಯಿಲೆಯಾದ ಬರ್ಗಸ್‌ಡಿಸೀಸ್ ಕೇವಲ ಸಿಗರೇಟು ಮತ್ತು ಬೀಡಿ ಸೇದುವವರಿಗೆ ಮಾತ್ರ ಬರುತ್ತದೆ. ಗಾಯ ನಿಧಾನವಾಗಿ ಗುಣವಾಗುವುದು, ಎಲುಬುಗಳು ಸುಲಭವಾಗಿ ಮುರಿದು ಹೋಗುವುದು, ಬಾಯಿಯ ಒಸಡು ಊದಿಕೊಳ್ಳುವುದು, ಹೃದಯಾಘಾತವಾಗುವುದು, ಅವೋರ್ಟ್ಟಿಕ್‌ಅನ್ಯುರಿಸಂ ಖಾಯಿಲೆ, ಪಾರ್ಶ್ವವಾಯು, ದೃಷ್ಟಿನಾಶ, ಹೆಂಗಸರಲ್ಲಿ ಮಕ್ಕಳಾಗದಿರುವುದು, ಗರ್ಭಪಾತ, ಅಂಗವಿಕಲ ಮಗು ಹುಟ್ಟುವ ಸಾಧ್ಯತೆ, ಹುಟ್ಟಿದ ಮಗು ಸತ್ತು ಹೋಗುವುದು (ಗರ್ಭಿಣಿಯರು ಸಿಗರೇಟು ಸೇವಿಸುವುದರಿಂದ) ಗಂಡಸರಿಗೆ ಷಂಡತನ ಹೀಗೆ ತಂಬಾಕು ಸೇವನೆಯಿಂದ ನಮಗೆ ಬರಬಹುದಾದ ಕಾಯಿಲೆಯ ಪಟ್ಟಿಬೆಳೆಯುತ್ತದೆ.

(ಮುಂದುವರಿಯುವುದು)

**ಆರೋಗ್ಯ ಮಾಹಿತಿಯ ಬಗ್ಗೆ ಪ್ರಶ್ನೆಗಳನ್ನು ಎಸ್.ಎಮ್.ಎಸ್.ಮೂಲಕವೂ ತಿಳಿಸಬಹುದು. ಸಂಚಾರಿ ದೂರವಾಣಿ ನಂ. : 9845136322**

## 2014ರ ವಿಜಯದಶಮಿ ಸ್ಪರ್ಧೆಗಳ ಫಲಿತಾಂಶ

**4ನೇ ತರಗತಿಯವರೆಗೆ**

ಭಕ್ತಿಗೀತೆ : 1) ದ್ರುಪದ್ 2) ಅದಿತಿ ರಾವ್ 3) ಪ್ರತ್ಯೂಷ್
ಚಿತ್ರರಚನೆ : 1) ಅದಿತಿ ರಾವ್ 2) ಸುಧಾನ್ಶು ರಾವ್ 3) ನೇಹಾ
ರಂಗವಲ್ಲಿ : 1) ಸುಧಾನ್ಶು ರಾವ್ 2) ಸ್ಕಂದ ಶಾನುಭಾಗ್

**1ರಿಂದ 7ನೇ ತರಗತಿಯವರೆಗೆ**

ಕಂಠಪಾಠ : 1) ಶ್ರಾವ್ಯ 2) ಶೈಲೇಶ್ 3) ಕೀರ್ತಿವರ್ಧನ್

**5ರಿಂದ 7ನೇ ತರಗತಿಯವರೆಗೆ**

ಭಕ್ತಿಗೀತೆ : 1) ಅಕ್ಷತಾ ರಾವ್ 2) ಪ್ರೇರಣಾ 3) ಕಿನ್ನರಿ
ಚಿತ್ರರಚನೆ : 1) ಯಾಜ್ಞವಲ್ಕ್ಯ 2) ನಿಭಾ 3) ಶ್ರಾವ್ಯ
ರಂಗವಲ್ಲಿ : 1) ಶ್ರಾವ್ಯ 2) ಅಕ್ಷತಾ ಡಿ. ಹೆಬ್ಬಾರ್ 3) ಅಕ್ಷತಾ ರಾವ್

**8ನೇ ತರಗತಿಯಿಂದ ಮೇಲ್ಪಟ್ಟು**

ಭಕ್ತಿಗೀತೆ : 1) ಲಹರಿ 2) ಶ್ರವಣ್ ಕುಮಾರ್ 3) ಸ್ವಾತಿ
ಚಿತ್ರರಚನೆ : 1) ಶ್ರವಣ್ ಕುಮಾರ್ 2) ಸುದೇಷ್ಣಾ ರಾವ್ 3) ಸ್ವಾತಿ
ರಂಗವಲ್ಲಿ : 1) ಸುದೇಷ್ಣಾ ರಾವ್ 2) ಐಶ್ವರ್ಯ 3) ಅಪೂರ್ವ ರಾವ್
ಕಂಠಪಾಠ : 1) ಸುದೇಷ್ಣಾ ರಾವ್ 2) – 3) ಸ್ವಾತಿ

**ಮುಕ್ತ ಅವಕಾಶ**

ಶಂಖ ಊದುವುದು :
1) ಕೊಕ್ರಾಡಿ ಸುರೇಶ್ ರಾವ್ 2) ವಸಂತಿ ದಿನೇಶ್ ಹೆಬ್ಬಾರ್ 3) ಜಯಶ್ರೀ ಗಣೇಶ್
ಬೆಂಕಿ ಉಪಯೋಗಿಸದೆ ಆಹಾರ ತಯಾರಿ :
1) ಪವಿತ್ರ ಎಲ್. ಕೆ. ರಾವ್ 2) ಪ್ರಣಮ್ಯ ಭಂಡಿ 3) ಭಾರತಿ ರಾವ್
ಹಸೆಮಣೆ/ಶೋಭಾನೆ ಹಾಡುಗಳು : 1) ಭಾರತಿ ಎಸ್. ರಾವ್ 2) ಸುಮಂಗಲ ಉಮೇಶ್

# ವಿಜಯದಶಮಿಯಂದು ಮಿಂಚಿದ ಕುಂಜಿಬೆಟ್ಟು ಶ್ರೀ ಶಾರದಾ ಹವ್ಯಾಸಿ ಯಕ್ಷಕಲಾವಿದರು

ಪ್ರತೀ ವರ್ಷದಂತೆ ಈ ವರ್ಷವೂ ಕೂಡಾ ನಮ್ಮ ಉಡುಪಿ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘದ ಹವ್ಯಾಸಿ ಯಕ್ಷಗಾನ ಕಲಾವಿದರು, ಇದೇ ತಾ.4-10-2014ರ ವಿಜಯದಶಮಿ ಪರ್ವದಿನದಂದು ಸಂಜೆ ಶ್ರೀ ಶಾರದಾ ಮಂಟಪದ ಸಭಾಂಗಣದಲ್ಲಿ ಯಕ್ಷಗಾನ ಬಯಲಾಟವೊಂದನ್ನು ಆಡಿದರು. 'ವೀರವೃಷಸೇನ' ಮತ್ತು 'ಶಶಿಪ್ರಭಾ ಪರಿಣಯ' ಎಂಬ ಪ್ರಸಂಗಗಳನ್ನು ಆಯ್ದುಕೊಳ್ಳಲಾಗಿತ್ತು. ಆರಂಭದಲ್ಲಿ 'ಕೋಡಂಗಿಯಾಗಿ ಸ್ಕಂದ ವಿಶ್ವನಾಥ ಶ್ಯಾನುಭೋಗ್, ಪೀಠಿಕೆ ಸ್ತ್ರೀವೇಷದಲ್ಲಿ ಶ್ರಾವ್ಯಾ ರವಿಶಂಕರ್ ಮತ್ತು ಬಾಲಗೋಪಾಲನಾಗಿ ಆದಿತ್ಯ ಸಂತೋಷ ರಾವ್ ಇವರುಗಳು, ಉತ್ತಮ ಅಭಿನಯ ನೀಡಿದರು. ವೀರ ವೃಷಸೇನನಾಗಿ ವ್ಯಾಸರಾವ್ ಕಲ್ಮಂಜೆ ಇವರ ಪಾತ್ರ ಪ್ರೌಢವಾಗಿತ್ತು. ಕೌರವನಾಗಿ ಅರವಿಂದ


ಶಶಿಪ್ರಭೆ-ಭ್ರಮರಕುಂತಳೆ-ಕಮಲಗಂಧಿನಿ-ದೂತಿ


ಕೃಷ್ಣ-ಅರ್ಜುನ-ವೃಷಸೇನ

ಕುಮಾರ್, ಭೀಮನಾಗಿ ಅಜಿತ್ ರಾವ್, ಅಶ್ವತ್ಥಾಮನಾಗಿ ಆಕಾಶರಾವ್ ಮಾರ್ಪಳ್ಳಿ, ಕೃಷ್ಣನಾಗಿ ಸಿ.ಕಾರ್ತೀಕ್ ರಾವ್ ಮತ್ತು ಅರ್ಜುನನಾಗಿ ಎಂ. ಸಂತೋಷ ರಾವ್ ಇವರುಗಳ ಪಾತ್ರಾಭಿನಯವು ಪ್ರೇಕ್ಷಕರ ಮನಸ್ಸನ್ನು ಗೆಲ್ಲುವಲ್ಲಿ ಯಶಸ್ವಿಯಾಗಿತ್ತು.

ಎರಡನೇಯ ಆಖ್ಯಾನ 'ಶಶಿಪ್ರಭಾ ಪರಿಣಯ'ದಲ್ಲಿ ಮಾರ್ಕಾಂಡತೇಜನಾಗಿ ಟಿ.ವಿಶ್ವನಾಥ್ ಶ್ಯಾನುಭಾಗ್, ಕಮಲ ಧ್ವಜನಾಗಿ ಟಿ.ವಾಗೀಶ ರಾವ್ ಇವರುಗಳು ಯೋಗ್ಯ ರೀತಿಯಲ್ಲಿ ಅಭಿನಯಿಸಿದರು. ಮಾಂಡವಿ ಮುನಿಯಾಗಿ ಅರವಿಂದ್ ಕುಮಾರ್, ಕಿರಾತನಾಗಿ ವಾಗೀಶ್ ರಾವ್ ಕಲುಂಜೆ, ನಾಗರಾಜ್ ರಾವ್.ವೈ, ಬೇಡರ ಪಡೆಯಲ್ಲಿ ಆಕಾಶ್ ಮತ್ತು ಕಾರ್ತೀಕೇಯ ಕೃಷ್ಣ ಇವರುಗಳೂ ಸಹಾ ತಮ್ಮ ಅಭಿನಯಗಳಿಂದಾಗಿ ಪ್ರೇಕ್ಷಕರ ಗಮನ ಸೆಳೆಯುವಲ್ಲಿ ಯಶಸ್ವಿಯಾದರು. ಚಿಕ್ಕ ಪಾತ್ರವಾದರೂ ಆದಿತ್ಯ ಎಸ್.ರಾವ್ ಇವರ ಕಾಡುಪ್ರಾಣಿ ಮೊಲದ ಪಾತ್ರವು ಉತ್ತಮವಾಗಿತ್ತು. ಉಭಯ ಆಖ್ಯಾನಗಳಲ್ಲಿ ಏಕಮಾತ್ರವಾಗಿ ಕಂಡುಬರುತ್ತಿದ್ದ ಹಾಸ್ಯಪಾತ್ರವಾದ ಇಲ್ಲಿನ ದ್ವಾರಪಾಲಕಿಯಾ ದೂತಿಯ ಪಾತ್ರವನ್ನು ವೈ.ಅಜಿತ್ ರಾವ್‌ರವರು ಯಶಸ್ವಿಯಾಗಿ ನಿರ್ವಹಿಸಿ ಪ್ರೇಕ್ಷಕರ ಮನಗೆದ್ದರು. ಭ್ರಮರ ಕುಂತಳೆಯಾಗಿ ಕು।ವೃಂದಾ ಕೆ. ರಾವ್, ಮಟ್ಟು, ಹಾಗೆಯೇ ಕಮಲಗಂಧಿನಿಯ ಪಾತ್ರದಲ್ಲಿ ಸಿ.ಕಾರ್ತಿಕ್ ರಾವ್ ಇವರುಗಳ ಅಭಿನಯವು ಮನೋಜ್ಞವಾಗಿತ್ತು. ಕಥಾನಾಯಕಿ ಶಶಿಪ್ರಭೆಯಾಗಿ ಸುಮನಾ ರಾವ್‌ರವರು ಪರಿಣಾಮಕಾರಿಯಾಗಿ ಅಭಿನಯಿಸಿದ್ದು ಪ್ರೇಕ್ಷಕರ ಗಮನ ಸೆಳೆಯುವಲ್ಲಿ ಯಶಸ್ವಿಯಾದರು.


ಘೋರರೂಪಿ

ಘೋರರೂಪಿಯಾಗಿ ಶಿಕ್ಷಕ ಶ್ರೀ ಕೃಷ್ಣಕುಮಾರ್ ಮಟ್ಟು ಮತ್ತು ಶ್ರೀದೇವಿಯಾಗಿ ಕಾರ್ತೀಕೇಯ ಕೃಷ್ಣ, ಇವರುಗಳ ಅಭಿನಯವು ಯಥೋಚಿತ ವಾಗಿತ್ತು. ಒಟ್ಟಿನಲ್ಲಿ, ಇನ್ನೂ ಸ್ವಲ್ಪ ಹೆಚ್ಚಿನ ತರಬೇತಿ ಹಾಗೂ ಅಭ್ಯಾಸವು ಎಲ್ಲಾ ಕಲಾವಿದರನ್ನೂ ಹೆಚ್ಚಿನ ಪರಿಪೂರ್ಣತೆಯ ಕಡೆಗೆ ಒಯ್ಯುತ್ತಿತ್ತೆಂದು ಕಂಡು ಬರುತ್ತಿತ್ತು. ಹಿಮ್ಮೇಳದಲ್ಲಿ ಭಾಗವತರಾಗಿ ಶ್ರೀ ಮೂಡುಬೆಳ್ಳೆ ಚಂದ್ರಕಾಂತ ರಾವ್, ಮದ್ದಳೆ ವಾದನದಲ್ಲಿ ಶ್ರೀ ರತ್ನಾಕರ ಆಚಾರ್ ಇವರುಗಳು ಸಹಕರಿಸಿದ್ದರು. ಶಿವಾನಂದ ಕೋಟ ಮತ್ತು ಶ್ರೀ ಗಣೇಶ ಶೆಣೈ ಚೆಂಡೆ ವಾದನದಲ್ಲಿ ಸಹಕರಿಸಿದ್ದರು. ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘದ ಸಹಕಾರ ದೊಂದಿಗೆ ಕಾರ್ಯಕ್ರಮವು ಯಶಸ್ವಿ ಯಾಗಿ ನೆರವೇರಿತು.

ವರದಿ : ಶ್ರೀ ಮ.ನಾ.ಹೆಬ್ಬಾರ, ಎಂ.ಎ, ಬಿ.ಎಸ್.


ಮಾರ್ತಂಡತೇಜ-ಕಮಲಧ್ವಜ

## ಮಾಂಗಲ್ಯಂ ತಂತುನಾನೇನ ....

ಶ್ರೀಮತಿ ಮಾಲತಿ ಮತ್ತು ದಿ ಪರಮೇಶ್ವರ ಹೆಬ್ಬಾರ್ ಕಬ್ಬಿನಾಲೆ,ಹೊನ್ನಕೊಪ್ಪಲ ಇವರ ಪುತ್ರ **ಸುಬೋಧ್** ಹಾಗೂ ಉಡುಪಿ ಅಂಬಲಪಾಡಿ ಶ್ರೀಮತಿ ವಿಜಯ ಮತ್ತು ಶ್ರೀ ರಘುಪತಿ ರಾವ್ ಇವರ ಪುತ್ರಿ **ಅರ್ಚನಾ** ಇವರ ವಿವಾಹವು 29-09-2014ರಂದು ಉಡುಪಿ ಕುಂಜಿಬೆಟ್ಟು ಶ್ರೀ ಶಾರದಾ ಮಂಟಪದಲ್ಲಿ ನೆರವೇರಿತು.

★★★ ★★★

ಚೆನ್ನಗೋಡು ಶ್ರೀ ಲಕ್ಷ್ಮೀನಾರಾಯಣ ರಾಯರ ಇವರ ಪುತ್ರ **ಸಂದೀಪ್** ಹಾಗೂ ಉಡುಪಿ ನಿಟ್ಟೂರಿನಲ್ಲಿ ವಾಸ್ತವ್ಯದಲ್ಲಿರುವ ಶ್ರೀಮತಿ ಶಶಿಕಲಾ ಮತ್ತು ಶ್ರೀ ಟಿ ಸುರೇಶ್‌ರಾವ್ ಇವರ ಪುತ್ರಿ **ಸ್ವಾತಿ** ಇವರ ವಿವಾಹವು 26-09-2014ರಂದು ಉಡುಪಿ ಕುಂಜಿಬೆಟ್ಟು ಶ್ರೀ ಶಾರದಾ ಮಂಟಪದಲ್ಲಿ ನೆರವೇರಿತು.

★★★ ★★★

ಶ್ರೀಮತಿ ವಾಣಿ ಮತ್ತು ಕೀರ್ತಿಶೇಷ ಮಹಾಬಲೇಶ್ವರ ಶ್ಯಾನುಬಾಗ್‌ರ ಪುತ್ರ **ಪವನ್** ಹಾಗೂ ಬ್ರಹ್ಮಾವರದಲ್ಲಿ ವಾಸ್ತವ್ಯದಲ್ಲಿರುವ ಶ್ರೀಮತಿ ವಿಮಲಾ ಮತ್ತು ಶ್ರೀ ರಾಜಾರಾವ್ ಇವರ ಪುತ್ರಿ **ರಾಧಿಕಾ** ಇವರ ವಿವಾಹವು 29-09-2014ರಂದು ಬ್ರಹ್ಮಾವರದ ರಥಬೀದಿಯ ಶ್ರೀ ಲಕ್ಷ್ಮೀವೆಂಕಟರಮಣ ಕಲಾ ಮಂದಿರದಲ್ಲಿ ನೆರವೇರಿತು.

## ಗೃಹಪ್ರವೇಶ

ಶ್ರೀಮತಿ ಮತ್ತು ಶ್ರೀ ಕೃಷ್ಣ ನಟ್ಟೋಜಿ (ಪಿ ಎನ್ ಸುಬ್ರಹ್ಮಣ್ಯ ರಾವ್ ಇವರ ಪುತ್ರ) ಇವರು ಮಂಗಳೂರಿನ ಕೋಡಿಕಲ್ ಕಲ್ಬಾವಿಯಲ್ಲಿ ನಿರ್ಮಿಸಿದ ನೂತನ ಮನೆ 'ಶಕುಂತಳ' ಇದರ ಪ್ರವೇಶೋತ್ಸವವನ್ನು ದಿನಾಂಕ 04-10-2014ರಂದು ನೆರವೇರಿಸಿದರು.

**ಶ್ರೀ ಮಾತಾ ಜ್ಯೋತಿಷ್ಯಾಲಯ**

ಶ್ರೀ ಸುಬ್ರಹ್ಮಣ್ಯ ಕ್ಷೇತ್ರ, ಚೌಳಿಕೆರೆ, ಬಾರ್ಕೂರು.

ಬಾರ್ಕೂರು ಸಂಸ್ಥಾನದ ಪಾರಂಪರ್ಯ ನಾಗಬ್ರಹ್ಮ ಹಾಗೂ ದುರ್ಗೆಯ ದರ್ಶನ ಪಾತ್ರಿಗಳು, ಜೋತಿಷ್ಯರು ಮತ್ತು ಪುರೋಹಿತರು ಅಷ್ಟ ಮಂಗಲ ಪ್ರಶ್ನೆ, ಆರೂಢರಾಶಿ ಪ್ರಶ್ನೆ, ಜಾತಕ, ನಾಗದರ್ಶನ ಮತ್ತು ಸರ್ಪಸಂಸ್ಕಾರ, ಆಶ್ಲೇಷಬಲಿ, ಪ್ರತಿಷ್ಠೆ, ಶಾಂತಿ ಹಾಗೂ ಶುಭ ಕರ್ಮಗಳಿಗೆ ಅಗತ್ಯವಿದ್ದಲ್ಲಿ ವಿಚಾರಿಸಿ.

**ಶ್ರೀ ರಾಘವೇಂದ್ರ ಭಟ್ (ಫೋನ್ : 9632302234.)**

**ಶ್ರೀ ವೈಷ್ಣವಿ ಜ್ಯೋತಿಷ್ಯಾಲಯ**

ನಮ್ಮಲ್ಲಿ ಜಾತಕಗಳನ್ನು ಮಾಡಿ ಕೊಡಲಾಗುವುದು.
ಹಾಗೂ ತತ್ಸಂಬಂಧ ಶಾಂತಿ ಹೋಮಾದಿಗಳನ್ನು ಮತ್ತು ಶುಭ ಕಾರ್ಯಕ್ರಮಗಳನ್ನು ನಮ್ಮಲ್ಲಿಯೇ ವ್ಯವಸ್ಥಿತವಾಗಿ ಮಾಡಿಕೊಡಲಾಗುವುದು.

**ವೇದಮೂರ್ತಿ ಚಿದಾನಂದ ಭಟ್**

| | |
|---|---|
| #1437, 5ನೇ ಮುಖ್ಯ ರಸ್ತೆ, 2ನೇ "ಡಿ" ಬ್ಲಾಕ್, 2ನೇ ಸ್ಟೇಜ್, ರಾಜಾಜಿನಗರ, ಬೆಂಗಳೂರು-560010 | ಶ್ರೀ ಅಗಸ್ತ್ಯೇಶ್ವರ ದೇವಸ್ಥಾನದ ಬಳಿ, ಕಿರಿಮಂಜೇಶ್ವರ, ಕುಂದಾಪುರ ತಾಲೂಕು, ಉಡುಪಿ ಜಿಲ್ಲೆ |

**ಮೊಬೈಲ್- 9886629697, 9986119865**

ನಮ್ಮ
ಪ್ರೀತಿಯ
ಓದುಗರಿಗೆ,
ಲೇಖಕರಿಗೆ, ಜಾಹೀರಾತುದಾರರಿಗೆ,
ಶ್ರೀಶಾರದಾ ವೇದಿಕೆಯ ಸದಸ್ಯರಿಗೆ
ಮತ್ತು ನಮ್ಮ ಎಲ್ಲಾ
ಸಮಾಜ ಬಾಂಧವರಿಗೆ
**ದೀಪಾವಳಿಯ**
**ಹಾರ್ದಿಕ ಶುಭಾಶಯಗಳು**
ಸಂಪಾದಕ ಮಂಡಳಿ,
ಶ್ರೀಶಾರದಾ ಪತ್ರಿಕೆ


ಸ್ವಾಮಿ ವಿವೇಕಾನಂದ ಉಲ್ಲೇಖ

‘‘ವಿಧವೆಯರ ಕಣ್ಣೀರನ್ನು ಒರೆಸುವ ಅಥವಾ ಅನಾಥರ ಬಾಯಿಗೆ ಒಂದು ತುತ್ತು ಹಾಕುವ ತತ್ವವನ್ನು ಪ್ರತಿಪಾದಿಸದ ಧರ್ಮ ಮತ್ತು ದೇವರನ್ನು ನಾನು ನಂಬುವುದಿಲ್ಲ’’

## ಸ್ಥಾನಿಕ ಸಮಾಜದ ಅಪ್ರತಿಮ ಸಾಧಕಿ ಪೂಜ್ಯ ಮಾತೃಶ್ರೀಯವರಿಗೆ

**2ನೇ ವರ್ಷಾಂತಿಕದ ನೆನಪಿನ ಕಾಣಿಕೆ**

ಜನನ: 1929



ನಿಧನ: 17-10-2012

**ಕರ್ವಾಲು ಶ್ರೀಮತಿ ವನಜಾಕ್ಷಿ ಅಮ್ಮ**
(ದಿ| ಕರ್ವಾಲು ಕೃಷ್ಣರಾಯರ ಪತ್ನಿ)
ಕರ್ವಾಲು, ನೀರೆಬೈಲೂರು, ಕಾರ್ಕಳ ತಾಲೂಕು

**ಕಡುಬಡತನದ ಬೇಗೆಯಲ್ಲಿ ಗಂಧದ ಕೊರಡಿನಂತೆ ತಮ್ಮ ದೇಹವನ್ನು ತೇದು ಮಕ್ಕಳು, ಮೊಮ್ಮಕ್ಕಳನ್ನು ಸಾಕಿ ಸಲಹಿದ ಮಾತೆಗೆ ಪ್ರೀತಿ ಪೂರ್ವಕ ನಮನಗಳು**

ಶಂಕರನಾರಾಯಣ ರಾವ್ ಕರ್ವಾಲ್ (ಪುತ್ರ)
KNK CORP PVT. LTD., BANGALORE
Mobile : 9449958151
E-mail-shankaranarayanarao@gmail.com

ಸಂಧ್ಯಾ ಎಸ್.ರಾವ್ (ಸೊಸೆ)
LANDLINE NO.080-23163431

ಸುದರ್ಶನ್ ರಾವ್ ಕರ್ವಾಲ್ (ಮೊಮ್ಮಗ)
Commercial Pilot, Jet Airways, Bangalore
Mobile : 9880363622

ಸಂಗೀತಾ ರಾವ್ ಕರ್ವಾಲ್ (ಮೊಮ್ಮಗಳು)
W/o ವಿವೇಕ್ ಎಸ್.ರಾವ್,
ಮೂಡುಶೆಡ್ಡೆ.

: Address :
Flat No.D-301, D-Block, ETA Garden Apartments, Near Binny Mills, Magadi Road, Bangalore - 560023.


ಪ್ರೊ : ಸುಧಾಕರ್ ರಾವ್ ಬೆಳ್ಳೆ
ಶ್ರೀಮಾತಾ ಇಲೆಕ್ಟ್ರಾನಿಕ್ಸ್
ಎಲ್ಲಾ ರೀತಿಯ ಗೃಹೋಪಯೋಗಿ ವಸ್ತುಗಳಿಗಾಗಿ
ಭೇಟಿ ನೀಡಿ....
ಪ್ರೀತಿ ಕಾಂಪ್ಲೆಕ್ಸ್, ಬೆಳ್ಮಣ್ಣು, ಉಡುಪಿ. ಫೋನ್ : 08258-274103
ಚೈತ್ರ ಕಾಂಪ್ಲೆಕ್ಸ್, ಪಡುಬಿದ್ರಿ ಗ್ರಾಮಪಂಚಾಯತ್‌ನ ಎದುರು. ಫೋನ್ : 0820-2599093


## ವಿದ್ಯಾರ್ಥಿ ವೇತನಕ್ಕೆ ಅರ್ಜಿ ಆಹ್ವಾನ

**ಉಡುಪಿ ಕುಕ್ಕಿಕಟ್ಟೆಯ ಶ್ರೀ ಎಲ್ಲೂರು ಲಕ್ಷ್ಮೀನಾರಾಯಣ ರಾವ್ ಜ್ಯೋತಿಷ್ಕ ಮೆಮೋರಿಯಲ್ ಚಾರಿಟೇಬಲ್ ಟ್ರಸ್ಟ್ (ರಿ.)** ವತಿಯಿಂದ 2014-15ನೇ ಸಾಲಿನ **ದಿ| ಡಾ.ವೈ.ಚಂದ್ರಶೇಖರರಾವ್ ಸ್ಮಾರಕ ವಿದ್ಯಾರ್ಥಿವೇತನಕ್ಕಾ**ಗಿ ಪ್ರತಿಭಾನ್ವಿತ ಹಾಗೂ ಆರ್ಥಿಕ ಸಹಾಯ ಅಗತ್ಯವಿರುವ ತಾಂತ್ರಿಕ ಹಾಗೂ ವೈದ್ಯಕೀಯ ವಿದ್ಯಾರ್ಥಿಗಳಿಂದ ಹಾಗೂ ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿ ತರಗತಿಗಳಲ್ಲಿ ಓದುತ್ತಿರುವ ವಿದ್ಯಾರ್ಥಿಗಳಿಗಾಗಿ **ದಿ| ಸಾತ್ವಿಕ್ ಶಾಸ್ತ್ರಿಸ್ಮಾರಕ ವಿದ್ಯಾರ್ಥಿವೇತನಕ್ಕಾ**ಗಿಯೂ ಅರ್ಜಿ ಆಹ್ವಾನಿಸಲಾಗಿದೆ. ಅರ್ಹ ವಿದ್ಯಾರ್ಥಿಗಳು ಕೈಬರಹದ ಅರ್ಜಿಯಲ್ಲಿ ತಮ್ಮ ವಿವರಗಳೊಂದಿಗೆ ಆದಾಯ ಹಾಗೂ ವ್ಯಾಸಂಗ ದೃಢಪತ್ರಿಕೆಗಳನ್ನು ಲಗತ್ತಿಸಿರಬೇಕು. ತಂದೆ-ತಾಯಿಯರ ವೃತ್ತಿ, ವಿಳಾಸ, ದೂರವಾಣಿ ಸಂಖ್ಯೆ ಹಾಗೂ ನಿಮ್ಮ ಬ್ಯಾಂಕ್ ಖಾತೆಯ ವಿವರಗಳನ್ನು (ಪಾಸ್ ಬುಕ್ಕಿನ ಮೊದಲ ಹಾಳೆಯ ಪ್ರತಿ) ಅರ್ಜಿಯಲ್ಲಿ ನಮೂದಿಸಿರಬೇಕು. ಕ್ರಮಬದ್ಧವಾಗಿ ಬರೆದ ಅರ್ಜಿಗಳನ್ನು ಮಾತ್ರ ಗಮನಿಸಲಾಗುವುದು. ಅರ್ಜಿ ಕಳುಹಿಸಲು ಕೊನೆಯ ದಿನಾಂಕ 31-10-2014. ಅರ್ಜಿಯನ್ನು ಈ ಕೆಳಗಿನ ವಿಳಾಸಕ್ಕೆ ಕಳುಹಿಸಬೇಕಾಗಿ ವಿನಂತಿ.

**ಡಾ| ವೈ.ಸುದರ್ಶನರಾವ್,**
ಕೆನರಾಹೆಲ್ತ್‌ಸೆಂಟರ್, ಅಂಜುಮಾನ್ ರಸ್ತೆ, ಸಿಟಿಬಸ್ಸ್ಟ್ಯಾಂಡ್ ಬಳಿ, ಉಡುಪಿ-576101


**Buying and selling shares as easy as checking your emails**
**Sharekhan Online Trading Account Features:**
- Your bank account gets directly linked to trading account
- Can do direct fund transfer from any of 11 leading banks
- Choose your trading account, Classic, FastTrade, TradeTiger
- Apply online for Stocks, Mutual Funds and IPO's

Contact : Pradeep Rao K.
Tel : 0824 2412903, 9448191028
Navadurga Share Services
Email : navdurga@bp.sharekhan.com
Sharekhan
YOUR GUIDE TO THE FINANCIAL JUNGLE
Visit : www.sharekhan.com
Sharekhan Ltd.: BSE Cash-INB011073351; F&O-INF011073351; CD-INE011073351; NSE - INB/ INF231073330; CD - INE231073330; MCX Stock Exchange : CD - INE261073330 DP: NSDL-IN-DP-NSDL-233-2003; CDSL -IN-DP-CDSL- 271-2004; PMS INP000000662; Mutual Fund: ARN 20669. Sharekhan Commodities Pvt.Ltd.: MCX- 10080(MCX/TCL/CORP/0425); NCDEX -00132; (NCDEX/TCM/CORP/0142); for any complaints email at igc@sharekhan.com. Regd Add:- A-206, Phoenix House, Phoenix Mills Compound, Senapati Bapat Marg, Lower Parel, Mumbai- 400013.Investing in equities & commodities future involves risk. Please carefully read the risk disclosure document as prescribed by SEBI & relevant exchanges and Do 's & Don'ts by NCDEX. (Subbroker Regn.Nos: BSE: INS010606122;NSE: INS23106924)




ತಂತ್ರಾಡಿ ವಿಶ್ವನಾಥ ಶಾನುಭೋಗ್
94487 24161
97417 85551
ಹರಿಕೃಷ್ಣ ಡಿಜಿಟಲ್ಸ್
ಶುಭ ಸಮಾರಂಭಗಳ ಛಾಯಾಚಿತ್ರಣ ಹಾಗೂ ವೀಡಿಯೊ ಚಿತ್ರಣಕ್ಕಾಗಿ ಸಂಪರ್ಕಿಸಿ
‘‘ಶ್ರೀರಂಗ’’, ವಿ. ಪಿ. ನಗರ, 3ನೇ ಮುಖ್ಯ ರಸ್ತೆ, ಕುಂಜಿಬೆಟ್ಟು, ಉಡುಪಿ - 576 102
ಸಮಾಜ ಬಾಂಧವರಿಗೆ ರಿಯಾಯಿತಿಯನ್ನಿತ್ತು ಪ್ರೋತ್ಸಾಹಿಸಲಾಗುವುದು



*Krishna Rao*
Ph : 2520652
Mob. : 9902029048
**KISHAN**
**Studio & Video**
**Indoor Photography & Port Folio Photography, Video & Mixing, Lamination**
MAIN ROAD, MAJOOR & BANTAKAL.


Owned & Published by : Sri Sthanika Dravida Brahmana Sangha (R.), Shri Sharada Mantapa, Sharada Nagara, Ku[redacted]-2520754
Edited by Krishnakumar Rao Mattu, Designed @ SriNidhi Computer Graphics, Rajataadri, Manipal, Printed at Agrahara Offsets, Udupi. E-[redacted]n Website : www.srisharada.org